**ಉಚಿತ ಪ್ರತಿಗಳಿಗಾಗಿ ಮತ್ತು**

**ಉಚಿತ ಪತ್ರಿಕೆಗಳಿಗಾಗಿ**

**ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ**




**ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬಹುದು.**


ನಮ್ಮ ವಿಳಾಸ:

**ದ ಕ್ರಿಸ್ಟಡೆಲ್ಫಿಯನ್ಸ್**

ಅಂಚೆ ಪೆಟ್ಟಿಗೆ ಸಂಖ್ಯೆ 535, ಫ್ರೇಜರ್ ಟೌನ್

ಬೆಂಗಳೂರು - 560 005


# ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು


**ಸಂಚಿಕೆ 4**




* ಕಣ್ಣೆತ್ತಿ ನೋಡಿರಿ
* ಒಂದು ಉದ್ದೇಶದಿಂದ ಸೃಷ್ಟಿಸಲಾಗಿದೆ
* ನಹೂಮನ ನಿನವೆ
  ಬ್ರಿಟಿಷ್ ಮ್ಯೂಸಿಯಂನಲ್ಲಿ ದಿಟ್ಟಿಸಿ ನೋಡುವಂತಹ ವಸ್ತುಗಳು
* ಸಹನೆ
* ಇಸ್ರಾಯೇಲ್ಯರಲ್ಲಿ ಪ್ರಾರಂಭದ ನ್ಯಾಯಸ್ಥಾಪಕರ ಚರಿತ್ರೆ

## ಕ್ರಿಸ್ಟಡೆಲ್ಫಿಯನ್ನರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಅಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.

**Co-ordinator : Linus Daniel**

**e-mail : info@choose2live.info**
http://www.choose2live.info/noothana_shristi

**Contact:**
The Christadelphians,
P.O.Box No 535,
Bangalore 560 005,
India.

ನೂತನ ಸೃಷ್ಟಿ ಪತ್ರಿಕೆಯ ತಂಡ

ಲೀನಸ್ ಡ್ಯಾನಿಯಲ್ : ಸಂಯೋಜಕರು

ಚೈತ್ರ ಸ್ವರೂಪ : ಕಾರ್ಯ ನಿರ್ವಹಣೆ, ಪುನರವಲೋಕನ ಮತ್ತು ಡಿ.ಟಿ.ಪಿ ಸಂಯೋಜಕರು.

ಸುಧೀರ್.ಬಿ.ಜಿ : ಭಾಷಾಂತರ

ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.
ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

*"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]*



# ಕಣ್ಣೆತ್ತಿನೋಡಿರಿ

ಬೇಸಿಗೆಯ ಸುಡುಬಿಸಿಲಿನ ಮಧ್ಯಾನ್ಹದ ವೇಳೆಯಲ್ಲಿ ನಿಮಗೆ ಎಲ್ಲಾ ಕೆಲಸಗಳಿಂದ ಬಿಡುವು ಪಡೆದುಕೊಂಡು ಪರಿಸರವನ್ನು ನೋಡಬೇಕು ಎನಿಸುತ್ತಿದೆ ಅಂದುಕೊಳ್ಳಿ. ಆಗ ನೀವು ಯಾವುದಾದರೂ ದಟ್ಟ ಕಾಡಿನಲ್ಲಿರುವ ಕಣಿವೆಯಲ್ಲಿ ಸಂಚರಿಸಿದಾಗ ಅಲ್ಲಿ, ಸಣ್ಣಸಣ್ಣ ಝರಿಗಳು ಬೆಟ್ಟದ ಮೇಲಿನಿಂದ ಬೀಳುತ್ತಿರುವುದನ್ನು ನೋಡಬಹುದು, ಅದೇರೀತಿ ಆ ಕಾಡಿನ ಮಧ್ಯದಲ್ಲಿ ಒಂದು ದೊಡ್ಡದಾದ ಬಂಡೆಯಿದ್ದರೆ, ನೀವು ಅದನ್ನು ಹತ್ತುತ್ತೀರಿ, ಆ ಬಂಡೆಯ ತುದಿಯನ್ನು ತಲುಪಿದಾಗ ಸಂಜೆಯಾಗಿದ್ದರೆ ಸೂರ್ಯನ ಕಿರಣಗಳು ಕಾಡಿನ ಎಲ್ಲಾ ಮರಗಳ ಮೇಲೆ ಬಿದ್ದು ಬಹಳ ಸುಂದರವಾದ ವಾತಾವರಣವನ್ನು ನಿರ್ಮಿಸಿರುತ್ತವೆ, ಅದು ನೋಡಲು ರಮಣೀಯವಾಗಿ ಕಣ್ಣಿಗೆ ತಂಪಾಗಿರುತ್ತದೆ. ಈ ರೀತಿಯಾದ ದೃಶ್ಯವನ್ನು ನಿಮ್ಮ ಜೀವನದಲ್ಲಿ ಮರೆಯಲು ಸಾಧ್ಯವಿಲ್ಲ ಅಲ್ಲವೇ?




ನಿಮ್ಮ ಈ ಅನುಭವವನ್ನು ನೋಡಿದಾಗ ಮನಸ್ಸಿಗೆ ತುಂಬಾಹಿತವಾಗಿ ಅನಿಸುತ್ತದೆ ಅಲ್ಲವೇ. ಈಗ ನಿಮ್ಮ ಯೋಚನೆಯನ್ನು ನಿಲ್ಲಿಸಿ, ನಿಮ್ಮ ಕಣ್ಣು ಯಾವ ಸುಂದರ ದೃಶ್ಯವನ್ನು ತುಂಬಿಕೊಂಡಿತು ಎಂಬುದನ್ನು ನೋಡಿರಿ.

## ನೀವು ಏನನ್ನು ನೋಡಿದಿರಿ?

ಅನೇಕ ಜನರು ಈ ರೀತಿಯ ಬೆಟ್ಟಗಳನ್ನು ಮೇಲಿನಿಂದ ಕೆಳಗಿನವರೆಗೂ ನೋಡುತ್ತಾರೆ, ಆದರೆ ಅವರು ಯಾವಾಗಲೂ ಒಂದೇ ರೀತಿಯ ವಸ್ತುವನ್ನು ಗಮನದಲ್ಲಿಟ್ಟುಕೊಂಡಿರುತ್ತಾರೆ. ಒಬ್ಬ ಪರಿಸರವಾದಿ ಈ ರೀತಿಯ ಕಾಡುಗಳನ್ನು ನೋಡುವಾಗ ಅವನ ದೃಷ್ಟಿ ಕೇವಲ ಸಸ್ಯಸಂಪತ್ತು ಮತ್ತು ಪ್ರಾಣಿಸಂಕುಲಗಳಲ್ಲಿ ಇರುವ ವ್ಯತ್ಯಾಸಗಳನ್ನು ಮತ್ತು ಈಗ ಅಳಿದುಹೋಗಿರುವ ಸಸ್ಯಸಂತತಿ ಪ್ರಾಣಿಸಂತತಿಗಳು, ಈಗಿರುವ ಪರಿಸರದ ಯೋಗಕ್ಷೇಮವನ್ನು ಕುರಿತು ಚಿಂತಿಸುತ್ತಾನೆ. ಒಬ್ಬ ಚರಿತ್ರಕಾರ ಯಾವಾಗಲೂ ಇಲ್ಲಿ ಈ ಹಿಂದೆ ನಡೆದಿರುವ ಚಾರಿತ್ರಿಕ ಅಥವಾ ಐತಿಹಾಸಿಕ ಘಟನೆಗಳನ್ನು ಮಾತ್ರ ಗಮನಿಸುತ್ತಾನೆ. ಅದೇರೀತಿ ಒಬ್ಬ ವಾತಾವರಣ ಶಾಸ್ತ್ರಜ್ಞ ಅಥವಾ ಪವನ ಶಾಸ್ತ್ರಜ್ಞ ಈ ಪರಿಸರದ ಮೂಲಕ ವಾತಾವರಣದಲ್ಲಿ ಮುಂದೆ ಹೇಗೆ ಬದಲಾವಣೆಗಳು ಉಂಟಾಗಬಹುದು ಎಂದು ಯೋಚಿಸುತ್ತಿರುತ್ತಾನೆ.

ಈ ಮೇಲಿನ 0ಯೋಚನೆಗಳೆಲ್ಲವೂ ಮುಖ್ಯವಾದುವುಗಳೇ ಆಗಿವೆ, ಆದರೆ ಇವೆಲ್ಲಕ್ಕಿಂತ ಮುಖ್ಯವಾದ ಅಂಶಗಳನ್ನು ಒಬ್ಬ ಕವಿ0ಯು ಬಹಳಕಾಲದ ಹಿಂದೆ0ಯೇ ಕಣ್ಣೆತ್ತಿನೋಡಿ, ತಾನು ಏನನ್ನು ನೋಡಿದೆ ಎಂಬುದನ್ನು ಈ ರೀತಿ0ಯಾಗಿ ತಿಳಿಸಿದ್ದಾನೆ.

''ನಾನು ಕಣ್ಣೆತ್ತಿ ಪರ್ವತಗಳ ಕಡೆಗೆ ನೋಡುತ್ತೇನೆ; ನನ್ನ ಸಹಾ0ಯವು ಎಲ್ಲಿಂದ ಬರುವುದು? ಭೂಮ್ಯಾಕಾಶಗಳನ್ನು ನಿರ್ಮಿಸಿದ 0ಯೆಹೋವನಿಂದಲೇ ನನ್ನ ಸಹಾ0ಯವು ಬರುತ್ತದೆ. ಆತನು ನಿನ್ನ ಪಾದಗಳನ್ನು ಕದಲಗೊಡಿಸದಿರಲಿ, ನಿನ್ನನ್ನು ಕಾ0ಯುವವನು ತೂಕಡಿಸದಿರಲಿ, ಇಗೋ ಇಸ್ರಾ0ಯೇಲ್ಯರನ್ನು ಕಾ0ಯುವಾತನು ತೂಕಡಿಸುವುದಿಲ್ಲ, ನಿದ್ರಿಸುವುದಿಲ್ಲ'' (ಕೀರ್ತನೆಗಳು 121:1–4).

ಇಲ್ಲಿ ನಾವು ಗಮನಿಸಬೇಕಾದ ವಿಚಾರವೆಂದರೆ, ಕೀರ್ತನೆಕಾರ ಕಣ್ಣೆತ್ತಿ ನೋಡಿ ತನ್ನ ಸುತ್ತಲಿರುವ ಎಲ್ಲಾ ಸೃಷ್ಟಿವಸ್ತುಗಳಿಗೆ ದೇವರೇ ಮುಖ್ಯಕಾರಣನು ಎಂದು ತಿಳಿಸಿದ್ದಾನೆ. ಜೊತೆಗೆ ದೇವರ ಸೃಷ್ಟಿಕಾರ್0ಯದಿಂದ ಆತ ಪ್ರಭಾವಿತಗೊಂಡು 0ಯೆಹೋವನನ್ನು ತನ್ನ ಜೀವನವೆಲ್ಲಾ ಮಹಿಮೆಪಡಿಸಿದ್ದಾನೆ.

## ಆತ್ಮೀಕ ಒಳನೋಟ

ಕೀರ್ತನೆಕಾರನ ದೃಷ್ಟಿಕೋನ ಪ್ರಸ್ತುತ ಜನರ ದೃಷ್ಟಿಕೋನಕ್ಕಿಂತ ಭಿನ್ನವಾದುದಾಗಿದೆ, ಆದರೆ ಆತನ ದೃಷ್ಟಿಕೋನ 0ಯಾರು 0ಯೆಹೋವದೇವರಲ್ಲಿ ದೃಢವಾದ ನಂಬಿಕೆ0ಯನ್ನಿಟ್ಟಿರುತ್ತಾರೋ ಅವರಿಗೆ ಆದರ್ಶಪ್ರಾ0ಯವಾದ ಸಂಗತಿ0ಯಾಗಿದೆ. ದೇವರು ನಮ್ಮನ್ನು ಎಲ್ಲಾ ಕಾಲದಲ್ಲೂ ಕಾ0ಯ್ದು ಕಾಪಾಡುವವನಾಗಿದ್ದಾನೆ ಎಂದು 0ಯಾರು ನಂಬಿರುತ್ತಾರೋ ಅವರೆಲ್ಲರಿಗೆ ಸ್ವಲ್ಪವೂ ಸಂಶ0ಯಕ್ಕೆ ಆಸ್ಪದವಾಗದ ಆದರ್ಶಪ್ರಾ0ಯ ದೃಷ್ಟಿ0ಯಾಗಿದೆ. ಲೋಕದಲ್ಲಿ ನಡೆ0ಯುವ ಸಂಗತಿಗಳು ಕೇವಲ 0ಯಾಂತ್ರಿಕವಾಗಿ ಬದಲಾಗುತ್ತಿರುತ್ತವೆ ಎಂಬುದಕ್ಕಿಂತ ಮಿಗಿಲಾದ ಸತ್ಯಸಂಗತಿ ಒಂದಿದೆ ಎಂಬುದನ್ನು ಇದರಿಂದ ನಾವು ತಿಳಿ0ಯಬಹುದಾಗಿದೆ. ಲೋಕದಲ್ಲಿ ನಡೆ0ಯುವ ಎಲ್ಲಾ ಕಾರ್0ಯಗಳಲ್ಲಿ ಒಂದು ಉದ್ದೇಶ ಅಡಗಿದೆ ಎಂಬುದನ್ನು ತಿಳಿ0ಯಬಹುದಾಗಿದೆ. ದೇವರು ಲೋಕವನ್ನು ಸುಂದರವಾಗಿ ನಿರ್ಮಿಸಿ, ರೂಪಿಸಿ, ಸ್ಥಾಪಿಸಿದ್ದಾನೆ. ಈ ವಿಷ0ಯವಾಗಿ ಕೀರ್ತನೆಕಾರ ಮತ್ತೊಂದು ಕಡೆ ತಾನು ನೋಡುತ್ತಿರುವ ಲೋಕವನ್ನು ಕುರಿತು ಈ ರೀತಿ ಮಹಿಮೆಪಡಿಸುತ್ತಾನೆ.

''ಬುಗ್ಗೆಗಳನ್ನು ತಗ್ಗಿಗೆ ಬರಮಾಡುತ್ತೀ; ಅವು ಪರ್ವತಗಳ ನಡುವೆ ಹರಿದು ಹೋಗುತ್ತವೆ. ಅವು ಅಡವಿ0ಯ ಮೃಗಗಳಿಗೆ ನೀರುಕೊಡುತ್ತವೆ; ಕಾಡುಕತ್ತೆಗಳು ದಾಹ ತೀರಿಸಿಕೊಳ್ಳುತ್ತವೆ'' (ಕೀರ್ತನೆಗಳು 104:10–11).

ಸೃಷ್ಟಿಕರ್ತನ ಎಲ್ಲಾ ಸೃಷ್ಟಿಗಳು ನಮ್ಮ ವಿವರಣೆಗೆ ನಿಲುಕುವುದಿಲ್ಲ, ಆತ ಹೇಗೆ ತನ್ನ ಕಾರ್0ಯ ಉದ್ದೇಶಗಳನ್ನು ನೆರವೇರಿಸುತ್ತಾನೆ ಮತ್ತು ಆತನ ಕಾರ್0ಯಗಳಲ್ಲಿ 0ಯೋಜನೆ ಇಲ್ಲದೆ ಒಂದು ಕಾರ್0ಯವೂ ನಡೆ0ಯುವುದಿಲ್ಲ, ನಾವುಗಳು ಸಹ ಹೇಗೆ ದೇವರ 0ಯೋಜನೆಗಳಲ್ಲಿ ಸೇರಬೇಕು, ಆತನನ್ನು ಹೇಗೆ ಆರಾಧಿಸಬೇಕು ಎಂಬುದನ್ನು ಕೀರ್ತನೆಕಾರ ಈ ರೀತಿ0ಯಾಗಿ ತಿಳಿಸಿಕೊಡುತ್ತಾನೆ.

''0ಯೆಹೋವನ ಮಹಿಮೆ0ಯು ಸದಾಕಾಲವೂ ಇರಲಿ; 0ಯೆಹೋವನಿಗೆ ಆತನ ಸೃಷ್ಟಿಗಳಿಂದ ಸಂತೋಷವಿರಲಿ; ..... ನಾನು ಬದುಕಿರುವವರೆಗೂ 0ಯೆಹೋವನನ್ನು ಕೀರ್ತಿಸುತ್ತಿರುವೆನು;



ಜೀವಮಾನವೆಲ್ಲಾ ನನ್ನ ದೇವರನ್ನು ಭಜಿಸುತ್ತಿರುವೆನು.... ನನ್ನ ಮನವೇ 0ಯೆಹೋವನನ್ನು ಕೊಂಡಾಡು, 0ಯಾಹುವಿಗೆ ಸ್ತೋತ್ರ'' (ಕೀರ್ತನೆಗಳು 104:31–35).

## ಮೊದಲಸಂಗತಿಗಳು ಮೊದಲು

0ಯೇಸುಕ್ರಿಸ್ತನ ರೀತಿ0ಯಲ್ಲಿ ಆತ್ಮೀಕ ಮತ್ತು ಲೌಕೀಕ ವಿಷ0ಯಗಳನ್ನು ಸಂಪೂರ್ಣವಾಗಿ ಮತ್ತು ಅತ್ಯುತ್ತಮವಾಗಿ ತಿಳಿದುಕೊಳ್ಳಲು 0ಯಾರಿಂದಲೂ ಸಾಧ್ಯವಿಲ್ಲ. ಆತ ಭೂಲೋಕದಲ್ಲಿ



ಜೀವಿಸಿದ್ದ ಕಾಲದಲ್ಲಿ ತನ್ನ ಸುತ್ತಲಿನ ಪರಿಸರದಲ್ಲಿ ನಡೆ0ಯುವ ಸಂಗತಿಗಳ ಮೂಲಕವೇ ಆತ್ಮೀಕ ವಿಷ0ಯವಾಗಿ ಪಾಠಗಳನ್ನು ತಿಳಿಸಿಕೊಡುತ್ತಿದ್ದನು. ಆತನ ಎಲ್ಲಾ ಸಾಮ್ಯಗಳಲ್ಲಿ ಲೋಕದ ಸಂಗತಿಗಳನ್ನು ಉದಾಹರಣೆ0ಯಾಗಿ ತೆಗೆದುಕೊಂಡು ಜನರಿಗೆ ಬೋಧನೆ ತಿಳಿಸಿಕೊಡುತ್ತಿದ್ದನು. ದಿನನಿತ್ಯ ನಮ್ಮ ಜೀವನದಲ್ಲಿ ನಡೆ0ಯುವ ಸಂಗತಿಗಳನ್ನು ಸರಿ0ಯಾಗಿ ದೃಷ್ಟಿಸಿ ನೋಡಿದಾಗ ಅವುಗಳ ಮೂಲಕ ನಾವು ಆತ್ಮೀಕವಾದ ಪಾಠಗಳನ್ನು ಅರ್ಥಮಾಡಿಕೊಳ್ಳಬಹುದು ಎಂದು ತಿಳಿಸಿಕೊಟ್ಟಿದ್ದಾನೆ. ಅದೇರೀತಿ ಕೆಲವೊಂದುಬಾರಿ ನೇರವಾಗಿ ವಿಷ0ಯಗಳನ್ನು ತಿಳಿಸಿಕೊಟ್ಟಿದ್ದಾನೆ. ಒಮ್ಮೆ ಆತನ ಶಿಷ್ಯರು ದಿನನಿತ್ಯದ ಸಮಸ್ಯೆಗಳು, ಸಂಕಟದ ಬಗ್ಗೆ 0ಯೋಚಿಸುತ್ತಿರುವಾಗ, 0ಯೇಸು ಈ ರೀತಿ ತಿಳಿಸಿದ್ದಾನೆ:



''ಈ ಕಾರಣದಿಂದ ನಮ್ಮ ಪ್ರಾಣಾಧಾರಣೆಗೆ ಏನು ಊಟಮಾಡಬೇಕು, ಏನು ಕುಡಿ0ಯಬೇಕು, ನಮ್ಮ ದೇಹರಕ್ಷಣೆಗೆ ಏನು ಹೊದ್ದುಕೊಳ್ಳಬೇಕು ಎಂದು ಚಿಂತೆ ಮಾಡಬೇಡಿರಿ ಎಂಬುದಾಗಿ ನಿಮಗೆ ಹೇಳುತ್ತೇನೆ. ಊಟಕ್ಕಿಂತ ಪ್ರಾಣವು ಉಡುಪಿಗಿಂತ ದೇಹವು ಮೇಲಾದದ್ದಲ್ಲವೇ. ಆಕಾಶದಲ್ಲಿ ಹಾರಾಡುವ ಹಕ್ಕಿಗಳನ್ನು ನೋಡಿರಿ; ಅವು ಬಿತ್ತುವುದಿಲ್ಲ, ಕೊ0ಯ್ಯುವುದಿಲ್ಲ, ಕಣಜಗಳಲ್ಲಿ ತುಂಬಿಟ್ಟುಕೊಳ್ಳುವುದಿಲ್ಲ; ಆದಾಗ್ಯೂ ಪರಲೋಕದಲ್ಲಿರುವ ನಿಮ್ಮ ತಂದೆ0ಯು ಅವುಗಳನ್ನು ಸಾಕಿಸಲಹುತ್ತಾನೆ; ಅವುಗಳಿಗಿಂತ ನೀವು ಹೆಚ್ಚಿನವರಲ್ಲವೋ?'' (ಮತ್ತಾ0ಯ 6:25–26).



ಕಾಗೆ0ಯು ಧಾನ್ಯವನ್ನು ಬಿತ್ತಿ, ಬೆಳೆದು ಕೊ0ಯ್ಯುವುದನ್ನು 0ಯಾರೂ ನೋಡಲು ಸಾಧ್ಯವಿಲ್ಲ ಅಲ್ಲವೇ? ಅದೇರೀತಿ ಪಾರಿವಾಳವೂ ಸಹ ತರಕಾರಿ0ಯನ್ನಾಗಲೀ, ಧಾನ್ಯವನ್ನಾಗಲೀ ಬೆಳೆ0ಯುವುದಿಲ್ಲ, ಆದರೂ ದೇವರು ಆ ಪಕ್ಷಿಗಳಿಗೆ ಕಾಲಕಾಲಕ್ಕೆ ಆಹಾರ ಸಿಕ್ಕುವಂತೆ ಮಾಡುತ್ತಾನೆ ಅಲ್ಲವೇ. ದೇವರು ಕೇವಲ ಪ್ರಾಣಿಪಕ್ಷಿಗಳನ್ನು ಮಾತ್ರ ಆರೈಕೆ ಮಾಡುವುದಿಲ್ಲ. ಕಾಡಿನಲ್ಲಿರುವ ಎಲ್ಲಾ ಗಿಡಮರಗಳನ್ನು ಸಹ ನೋಡಿಕೊಳ್ಳುತ್ತಾನೆ ಎಂದು 0ಯೇಸು ಕ್ರಿಸ್ತ ತಿಳಿಸಿಕೊಟ್ಟಿದ್ದಾನೆ.

**“ಇದಲ್ಲದೆ ಉಡುಪಿನ ವಿಷಯದಲ್ಲಿ ಚಿಂತೆ ಮಾಡುವುದೇಕೆ? ಅಡವಿಯ ಹೂಗಳು ಬೆಳೆಯುವ ರೀತಿಯನ್ನು ಯೋಚಿಸಿ ತಿಳಿಯಿರಿ; ಅವುಗಳು ದುಡಿಯುವುದಿಲ್ಲ, ನೂಲುವುದಿಲ್ಲ; ಆದಾಗ್ಯೂ ಈ ಹೂವುಗಳಲ್ಲಿ ಒಂದಕ್ಕಿರುವ ಅಲಂಕಾರವು ಅರಸನಾದ ಸೊಲೋಮೋನನಿಗೆ ಸಹ ಅವನು ತನ್ನ ಸಕಲ ವೈಭವದಿಂದಿರುವಾಗಲೂ ಇರಲಿಲ್ಲವೆಂದು ನಿಮಗೆ ಹೇಳುತ್ತೇನೆ”** (ಮತ್ತಾಯ 6:28–29).

ಇಲ್ಲಿ ಯೇಸುಕ್ರಿಸ್ತ ದೇವರು ಲೋಕವನ್ನು ನೋಡಿಕೊಳ್ಳುವವನಾಗಿದ್ದಾನೆ ಎಂದು ತಿಳಿಸಿಕೊಟ್ಟಿದ್ದಾನೆ. ಏಕಂದರೆ ದೇವರು ಲೋಕವನ್ನು ಸೃಷ್ಟಿಮಾಡಿದ್ದಾನೆ; ಅದುದರಿಂದ ತನ್ನ ಸೃಷ್ಟಿಯನ್ನು ಕಾಪಾಡುವ ಕೆಲಸವನ್ನು ಸಹ ದೇವರೇ ಮಾಡುತ್ತಾನೆ. ಇದು ದೇವರ ಯೋಜನೆಯ ಭಾಗವಾಗಿದೆ. ಅದೇರೀತಿ ನಾವುಗಳ ಸಹ ದೇವರ ಸೃಷ್ಟಿಯಾಗಿದ್ದೇವೆ, ಆದ್ದರಿಂದ ದೇವರು ಆತನ ಸೃಷ್ಟಿಯಾದ ನಾವುಗಳು ಮರಣದಿಂದ ನಾಶವಾಗದೆ ನಿತ್ಯಜೀವ ಪಡೆಯಬೇಕು ಎಂದು ಆಶಿಸುತ್ತಾನೆ. ಈ ವಿಷಯವಾಗಿ ಯೇಸುಕ್ರಿಸ್ತ ನಮಗೆ ಈ ರೀತಿ ತಿಳಿಸಿಕೊಡುತ್ತನೆ. ನಾವು ದೇವರ ಬಗ್ಗೆ ಎಷ್ಟು ಆದ್ಯತೆಯನ್ನು ಕೊಡುತ್ತೇವೆಯೋ ಅದಕ್ಕಿಂತ ಮಿಗಿಲಾದ ಆಧ್ಯತೆಯನ್ನು ದೇವರು ನಮಗೆ ಕೊಡುತ್ತಾನೆ, ಹಾಗಾಗಿ ನಾವು ಆತನ ಸೃಷ್ಟಿಯನ್ನು ನೋಡುವಾಗ, ನಮ್ಮ ಒಳಗಣ್ಣನ್ನು ತೆರೆದು ನಮ್ಮ ಕಣ್ಣುಗಳನ್ನು ಮೇಲೆತ್ತಿ ಆತನ ಕಾರ್ಯಗಳನ್ನು ಗಮನಿಸಬೇಕಾಗಿದೆ. ಈ ವಿಷಯವಾಗಿ ಯೇಸುಕ್ರಿಸ್ತ ಕೇವಲ ಒಂದೇ ವಾಕ್ಯದಲ್ಲಿ ತಿಳಿಸಿಕೊಟ್ಟಿದ್ದಾನೆ.

**“ಹೀಗಿರುವುದರಿಂದ ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ, ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವುವು”** (ಮತ್ತಾಯ 6:33).

ನಾವುಗಳು ನಮ್ಮ ಈ ಲೌಕೀಕ ಜೀವಿತದ ಜಂಜಾಟದಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ, ಆದರೆ ನಾವು ಲೌಕೀಕ ಜಂಜಾಟಕ್ಕೆ ವಿರಾಮ ಹಾಕಿ, ಸ್ವಲ್ಪಹೊತ್ತು ನಿಂತು, ನಮ್ಮ ಸುತ್ತಲಿನ ಪರಿಸರವನ್ನು ನೋಡಿದಾಗ, ಅದು ಹೂವಿನ ಸೌಂದರ್ಯವೇ ಆಗಿರಬಹುದು, ಬೆಟ್ಟಗಳ ನಡುವಿನ ಸುಂದರ ಸೂರ್ಯಾಸ್ತಮಾನವೇ ಅಗಿರಬಹುದು, ಆಗ ದೇವರ ಸೃಷ್ಟಿಕಾರ್ಯವನ್ನು ನೆನಪು ಮಾಡಿಕೊಳ್ಳಿ, ಕಣ್ಣೆತ್ತಿನೋಡಿ ನಿಮಗೆ ಏನು ಕಾಣಿಸುತ್ತದೆ.

**“ನಿನ್ನ ಕೈ ಕೆಲಸವಾಗಿರುವ ಆಕಾಶಮಂಡಲವನ್ನೂ ನೀನು ಉಂಟುಮಾಡಿದ ಚಂದ್ರ ನಕ್ಷತ್ರಗಳನ್ನು ನಾನು ನೋಡುವಾಗ– ಮನುಷ್ಯನು ಎಷ್ಟುಮಾತ್ರದವನು, ಅವನನ್ನು ನೀನು ಯಾಕೆ ನೆನಸಬೇಕು? ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು? ....... ನಮ್ಮ ಕರ್ತನಾದ ಯೆಹೋವನೇ ನಿನ್ನ ನಾಮವು ಭೂಲೋಕದಲ್ಲೆಲ್ಲಾ ಎಷ್ಟೋ ಮಹಿಮೆಯುಳ್ಳದ್ದು”** (ಕೀರ್ತನೆಗಳು 8:3, 4, 9).

**–ಲಿಸ್ಸಿ ಫೌಲ್ಕ್ಸ್**



# ಒಂದು ಉದ್ದೇಶದಿಂದ ಸೃಷ್ಟಿಸಲಾಗಿದೆ

ಹಲವಾರು ಜನರ ಮನಸ್ಸಿನಲ್ಲಿ –“ ಈ ಪ್ರಪಂಚವು ಹೇಗೆ ಸೃಷ್ಟಿಯಾಯಿತು?” ಎಂಬ ಪ್ರಶ್ನೆ ಇರುತ್ತದೆ. ಇದಕ್ಕೆ ಉತ್ತರವೆಂದರೆ –ಸತ್ಯವೇದದ ಆದಿಕಾಂಡ ಪುಸ್ತಕದಲ್ಲಿ ಪ್ರಪಂಚದ ಸೃಷ್ಟಿಕಾರ್ಯವನ್ನು ತಿಳಿಸಿಕೊಡುತ್ತದೆ. ಇದರಲ್ಲಿ ಬರೆಯಲ್ಪಟ್ಟಿರುವ ವಿಷಯವನ್ನು ಕೆಲವರು ಕಲ್ಪನೆ ಅಥವಾ ಕಥೆ ಎಂದು ನಿರಾಕರಿಸಿಬಿಡುತ್ತಾರೆ. ಆದರೆ ವಿಜ್ಞಾನಿಯಾದ ಜಾನ್‌ಹೆಲಾವೆಲ್ ರವರು ಆ ರೀತಿಯ ಅನಿಸಿಕೆ ಅಭಿಪ್ರಾಯ ಒಂದು ದೊಡ್ಡತಪ್ಪು ಎಂದು ವಿವರಿಸಿದ್ದಾರೆ. ಜಾನ್ ಹೆಲಾವೆಲ್‌ರವರು ಅನೇಕ ವೈಜ್ಞಾನಿಕ ಲೇಖನಗಳನ್ನು ಪ್ರಕಟಪಡಿಸಿದ್ದಾರೆ. ಈ ಲೇಖನವನ್ನು ಅವರ ಇತ್ತೀಚಿನ ಪುಸ್ತಕವಾದ **“ಕ್ರಿಯೇಷನ್ ಆರ್ ಎವಲ್ಯೂಶನ್?”** (ಸೃಷ್ಟಿ ಅಥವಾ ವಿಕಾಸವಾದ) ಎಂಬ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ.

## ಬೃಹತ್ ಸ್ಫೋಟ? (ಬಿಗ್ ಬ್ಯಾಂಗ್?)

ಬೃಹತ್ ಸ್ಫೋಟ ಸಿದ್ದಾಂತ ತಪ್ಪಾದುದು ಆಗಿದೆ ಎಂದು ತಿಳಿಯುವ ಮೊದಲು ಎರಡು ಸಂಗತಿಗಳನ್ನು ಗಮನಿಸಬೇಕು. ಮೊದಲನೆಯದಾಗಿ– ಸತ್ಯವೇದವು ಲೋಕದ ಸೃಷ್ಟಿಯ ಕಾರ್ಯದಲ್ಲಿ ದೇವರ ಉದ್ದೇಶವೇನು ಎಂಬುದನ್ನು ತಿಳಿಯಬೇಕಾಗಿದೆ. ಎರಡನೆಯದಾಗಿ– ಅನೇಕ ವೈಜ್ಞಾನಿಕ ಲೇಖನಗಳ ಸರಮಾಲೆಗಳು ಸೃಷ್ಟಿಯನ್ನು ಕುರಿತು ಇದ್ದರೂ ಅವುಗಳ ಸರಿಯಾದ ಕಾರಣಗಳನ್ನು ತಿಳಿಸದೇ ಇರುವುವುಗಳಾಗಿವೆ.

ವಿಶ್ವವು ಬೆಳವಣಿಗೆ ಹೊಂದುತ್ತಾ ದೊಡ್ಡದಾಗಿ ಸ್ಫೋಟಗೊಂಡು ನಿರ್ಮಾಣವಾಯಿತು ಎಂದು ವಿಜ್ಞಾನಿಗಳು ಬೃಹತ್ ಸ್ಫೋಟ(ಬಿಗ್ ಬ್ಯಾಂಗ್) ಸಿದ್ಧಾಂತದಲ್ಲಿ ತಿಳಿಸಿದ್ದಾರೆ. ಆದರೆ ಸ್ಫೋಟವಾಗುವುದಕ್ಕಿಂತ ಮುಂಚೆ ಹೇಗೆ ಸೃಷ್ಟಿಯಾಯಿತು? ಎಂದು ತಿಳಿಸುವುದಿಲ್ಲ. ಇತ್ತೀಚಿಗೆ ವಿಶ್ವಶಾಸ್ತ್ರಜ್ಞರು ಬಿಗ್ ಬ್ಯಾಂಗ್ ಸ್ಫೋಟಕ್ಕಿಂತ ಮುಂಚಿತವಾಗಿ ವಿಶ್ವದ ಸೃಷ್ಟಿಯಾಗಿತ್ತು ಎಂಬುದನ್ನು ಒಪ್ಪಿಕೊಂಡಿದ್ದಾರೆ.

ಈ ಮೇಲಿನ ವೈಜ್ಞಾನಿಕ ಸಿದ್ಧಾಂತದ ನಂಬಿಕೆ ಹಲವಾರು ಪ್ರಶ್ನೆಗಳನ್ನು ಹುಟ್ಟಿಹಾಕಿದೆ– ಈ ಸ್ಫೋಟದ ಕಾರ್ಯ ಹೇಗೆ ಪ್ರಾರಂಭವಾಯಿತು ಮತ್ತು ಸ್ಫೋಟಕ್ಕಿಂತ ಮುಂಚಿತವಾಗಿ ವಿಶ್ವದ ಸ್ಥಿತಿ ಹೇಗಿತ್ತು? ಆ ಸ್ಫೋಟ ಮತ್ತು ವಿಕಾಸ ಎಲ್ಲಾ ಕಾಲದಲ್ಲೂ ಸದಾ ನಡೆಯುತ್ತಿದೆಯೇ? ವಿಶ್ವಕ್ಕೆ ಕೊನೆಯೇ ಇಲ್ಲವೇ?

ಈ ಮೇಲಿನ ಪ್ರಶ್ನೆಗಳಿಗೆ ಉತ್ತರ ಹುಡುಕಲು ಮತ್ತು ವಿಶ್ವದ ಉಗಮವನ್ನು ತಿಳಿಯಲು ವಿಶ್ವದಾದ್ಯಂತ ಸಂಶೋಧನೆಗೆ ಕೋಟ್ಯಾನುಗಟ್ಟಲೆ ಹಣವನ್ನು ಪ್ರತಿವರ್ಷ ವೆಚ್ಚ ಮಾಡಲಾಗುತ್ತಿದೆ. ಆದರೆ ನಮ್ಮ ರೀತಿಯ ಹಲವಾರು ಜನರಿಗೆ ಈ ಮೇಲಿನ ಪ್ರಶ್ನೆಗಳು ಸ್ವಲ್ಪ ಆಸಕ್ತಿದಾಯಕ ಆಗಿದ್ದರೂ, ಇವುಗಳೇನು ನಮ್ಮ ದಿನನಿತ್ಯದ ಬದುಕಿಗೆ ತೊಡಕಾಗುವುದಿಲ್ಲ. ಏಕಂದರೆ ನಮಗೆ ಈ ಮೇಲಿನ ಪ್ರಶ್ನೆಗಳಿಗೆ ಉತ್ತರ ಸಿಕ್ಕಿರುವುದರಿಂದ, ಮೇಲಿನ ಪ್ರಶ್ನೆಗಳು ತೊಡಕಾಗಲು ಸಾಧ್ಯವೇ?

## ಗಣನೆಗೆ ತೆಗೆದುಕೊಳ್ಳಬೇಕಾದ ಪ್ರಶ್ನೆಗಳು :

ನಾವು ನಿಜವಾಗಿ ಉತ್ತರ ತಿಳಿಯಬೇಕಾದ ಕೆಲವು ಪ್ರಶ್ನೆಗಳೆಂದರೆ, ನಾವು ಯಾಕೆ ಇಲ್ಲಿದ್ದೇವೆ? ನಮ್ಮ ಜೀವನದ ಉದ್ದೇಶವೇನು? ನಮ್ಮ ಜೀವನವನ್ನು ನಿಯಂತ್ರಿಸುತ್ತಿರುವವರು ಎಲ್ಲಿದ್ದಾರೆ? ಮತ್ತು ಮರಣದ ನಂತರ ಏನಾಗುತ್ತದೆ? ಬೇರೆ ಏನದರೂ ಇದೆಯೇ? ಗಮನಿಸಬೇಕಾದ



ಅಂಶವೆಂದರೆ ಈ ಮೇಲಿನ ಪ್ರಶ್ನೆಗಳಿಗೆ ವಿಜ್ಞಾನದ ಬಳಿ ಉತ್ತರವಿಲ್ಲ. ವಿಜ್ಞಾನಿಗಳು ಈ ಮೇಲಿನ ಪ್ರಶ್ನೆಗಳಿಗೆ ಉತ್ತರ ಕೊಡಲಾರರು, ಏಕಂದರೆ ವಿಜ್ಞಾನಿಗಳು ಯಾವಾಗಲೂ ಹೇಗೆ? ಎಂಬುದರ ಬಗ್ಗೆ ಯೋಚಿಸುತ್ತಿರುತ್ತಾರೆಯೇ ಹೊರತು ಯಾಕೆ? ಎಂಬುದರ ಬಗ್ಗೆ ಸಂಶೋಧಿಸುವುದಿಲ್ಲ. ಉದಾಹರಣೆಗೆ ಹುಲ್ಲು ಹಸಿರಾಗಿರುತ್ತದೆ, ಹೇಗಂದರೆ ಅದರಲ್ಲಿರುವ ಪತ್ರಹರಿತ್ತು(ಕ್ಲೋರೋಫಿಲ್) ಬೆಳಕಿನಲ್ಲಿರುವ ಎಲ್ಲಾ ಬಣ್ಣಗಳನ್ನು ಹೀರಿಕೊಳ್ಳುತ್ತದೆ, ಆದರೆ ಹಸಿರುಬಣ್ಣ ಹೀರಿಕೊಳ್ಳುವುದಿಲ್ಲ. ಆದರೆ ಅದು ಏಕೆ ನೀಲಿಯಾಗಿಲ್ಲ ಹಸುರಾಗಿ ಇರುತ್ತದೆ ಬೇರೆ ಬಣ್ಣವಿಲ್ಲ ಎಂಬುದನ್ನು ತಿಳಿಸುವುದಿಲ್ಲ. ಅದೇರೀತಿ ನಮ್ಮ ಜೀವನದ ಮುಖ್ಯ ಉದ್ದೇಶವೇನು ಎಂಬುದನ್ನು ಇದುವರೆವಿಗೂ ವಿಜ್ಞಾನಿಗಳು ಕಂಡುಹಿಡಿಯಲಾಗಿಲ್ಲ. ಈ ವಿಶ್ವವು ಯಾವುದೇ ಉದ್ದೇಶವಿಲ್ಲದೆ ಅಕಸ್ಮಾತ್ ಸೃಷ್ಟಿಯಾಗಿದೆ ಎಂಬ ಹಾರಿಕೆಯ ಕಾರಣಗಳನ್ನು 19 ಮತ್ತು 20ನೇ ಶತಮಾನದವರೆಗೆ ಜನರು ಒಪ್ಪಿಕೊಳ್ಳುತ್ತಿದ್ದರು, ಆದರೆ ಈಗ ವೈಜ್ಞಾನಿಕ ಕಾರಣಗಳನ್ನು ಪ್ರಶ್ನಿಸಬಹುದಾಗಿದೆ.

ನಾವು ಮುಂದುವರೆದು ಕಣ್ಣೆತ್ತಿ ವಿಶ್ವವನ್ನು ದೃಷ್ಟಿಸಿದರೆ ಅಥವಾ ಆಳವಾಗಿ ನೋಡಿದರೆ, ಪ್ರತಿಯೊಂದು ಜೀವಿಗಳ ರಚನೆಯನ್ನು ತಿಳಿಯಬಹುದು ಮತ್ತು ಪ್ರತಿಯೊಂದರ ಗುಣಲಕ್ಷಣಗಳು ಸಹ ವಿಶೇಷವಾಗಿರುತ್ತವೆ, ನಾವು ಮಹಾ ಮಹಾ ಸಂಕೀರ್ಣತೆಗಳನ್ನು ಕಾಣಬಹುದಾಗಿದೆ. ಅದು ಡಾರ್ವಿನ್‌ನ "ಅಮಿಬಾ" ಸಂಶೋಧನೆ ಆಗಿರಬಹುದು, ಐನ್‌ಸ್ಟೈನ್‌ನ ರಿಲೇಟಿವಿಟಿ ಸಿದ್ಧಾಂತ ಆಗಿರಬಹುದು, ಬೊಹ್ರಾರವರ ಕ್ವಾಂಟಮ್ ಸಿದ್ಧಾಂತವಾಗಿರಬಹುದು, ಇತ್ತೀಚಿನ ವಿಶ್ವಶಾಸ್ತ್ರಜ್ಞರ ಪ್ರಕಾರ, ಈ ಎಲ್ಲ ವಿಜ್ಞಾನಿಗಳ ಸಂಶೋಧನೆಗಳನ್ನು ಮೀರುವ ಎಲ್ಲವನ್ನೂ ನಿಯಂತ್ರಿಸುವ ಒಂದು ಶಕ್ತಿಯ ಕಾರ್ಯ ಇದೆ ಮತ್ತು ಸೃಷ್ಟಿಯ ಕಾರ್ಯದಲ್ಲಿ ಒಂದು ಉದ್ದೇಶ ಅಡಗಿದೆ ಎಂಬ ಅಂಶವನ್ನು ಮನಗಂಡಿದ್ದಾರೆ. ಆ ಎಲ್ಲವನ್ನೂ ನಿಯಂತ್ರಿಸುವ ಶಕ್ತಿ ಅಥವಾ ಸೃಷ್ಟಿಕಾರ್ಯದ ಉದ್ದೇಶವನ್ನು ಸತ್ಯವೇದದಲ್ಲಿ ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ.

## ಸತ್ಯವೇದದಲ್ಲಿ ಸೃಷ್ಟಿಯ ಬಗ್ಗೆ ವಿವರಣೆ :

ಎಲ್ಲಾ ಸೃಷ್ಟಿಯ ಬಗ್ಗೆ ಸತ್ಯವೇದವು ವಿವರಣೆಯನ್ನು ಕೊಡುತ್ತದೆ. ವಸ್ತುಗಳು ಯಾಕೆ ಸೃಷ್ಟಿಯಾಗಿವೆ ಎಂಬುದರ ಬಗ್ಗೆ ಹಂತಹಂತವಾಗಿ ವಿವರವಾಗಿ ತಿಳಿಸಿಕೊಡುತ್ತದೆ. ಸತ್ಯವೇದವು ಮಹಿಮೆಯುಳ್ಳ ವಾಕ್ಯದಿಂದ ಪ್ರಾರಂಭವಾಗುತ್ತದೆ:

**"ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು"** (ಆದಿಕಾಂಡ 1:1).



ಈ ಮೇಲಿನ ವಾಕ್ಯದಲ್ಲಿ ಸೃಷ್ಟಿಕರ್ತನಾದ ದೇವರ ಕೆಲಸವನ್ನು ತಿಳಿಸಿಕೊಡುತ್ತದೆ. ಈ ವಾಕ್ಯದ ಮೂಲ ಭಾಷೆಯಲ್ಲಿ "ಭೂಮಿ"ಯನ್ನು ಏಕವಚನದಲ್ಲೂ "ಆಕಾಶ" ಎಂಬ ಪದವನ್ನು ಬಹುವಚನದಲ್ಲೂ ಇದೆ. ಇದರಿಂದ ನಮಗೆ ತಿಳಿದುಬರುವ ಅಂಶವೆಂದರೆ, ದೇವರು ಇಡೀ ವಿಶ್ವ (ಆಕಾಶ)ವನ್ನು ಸೃಷ್ಟಿಸಿದ್ದಾನೆ, ಆದರೆ ಅದರಲ್ಲಿ ತನ್ನ ಯೋಜನೆ ನೆರವೇರಲು ಒಂದು ಗ್ರಹವನ್ನು ಸೃಷ್ಟಿಸಿದ್ದಾನೆ ಅದೇ ಭೂಮಿಯಾಗಿದೆ.

ಮುಂದಿನ ವಾಕ್ಯದಲ್ಲಿ ಕ್ರಮವಿಲ್ಲದ, ಕತ್ತಲಿನಿಂದ ಕೂಡಿದ ಭೂಮಿಯ ವಿವರಣೆಯನ್ನು ತಿಳಿಸುತ್ತದೆ. ಭೂಮಿಯ ಆ ಸ್ಥಿತಿಯಲ್ಲಿ ಜೀವಿಗಳು ಜೀವಿಸಲು ಸಾಧ್ಯವೇ ಇರಲಿಲ್ಲ, ಆನಂತರ ದೇವರ ಯೋಜನೆಗಳ ಕಾರ್ಯ ಪ್ರಾರಂಭವಾಯಿತು. ಅದರಂತೆ ದೇವರ ಶಕ್ತಿಯು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು, ದೇವರ ಆಜ್ಞೆಯಂತೆ ಬೆಳಕು ಉಂಟಾಯಿತು, ಆ ಬೆಳಕು ಕತ್ತಲೆಯನ್ನು ದೂರಮಾಡಿತು. ಇಲ್ಲಿ ನಾವು ಸೂಕ್ಷ್ಮವಾಗಿ ಗಮನಿಸಬೇಕಾದ ಅಂಶವೆಂದರೆ, ದೇವರು ಯಾವುದೇ ಇರುವ ವಸ್ತುಗಳನ್ನು ಬದಲಾವಣೆ ಮಾಡಿ ಸೃಷ್ಟಿಸಲಿಲ್ಲ, ಪ್ರತಿಯೊಂದು ವಸ್ತುಗಳನ್ನು ಮತ್ತು ಜೀವಿಗಳನ್ನು ಹೊಸದಾಗಿ ಸೃಷ್ಟಿಸಿದ್ದಾನೆ; ದೇವರ ಪ್ರತಿಯೊಂದು ಸೃಷ್ಟಿಕಾರ್ಯವು ಮುಂದೆ ಜೀವಿಗಳ ಮತ್ತು ಮಾನವರ ಜೀವನಕ್ಕೆ ಸಹಕಾರಿಯಾಗುವಂತೆ ಮತ್ತು ಯೋಗ್ಯವಾಗುವಂತೆ ಸೃಷ್ಟಿಸಿದ್ದಾನೆ. ಪ್ರತಿಯೊಂದನ್ನು ಬೇರೆಬೇರೆ ಮಾಡಿ ವಿಭಾಗಿಸಿರುವುದನ್ನೂ ಸಹ ಕಾಣಬಹುದಾಗಿದೆ. ಇದನ್ನು ನಾವು,

"ದೇವರು ಬೆಳಕನ್ನೂ ಕತ್ತಲೆಯನ್ನು ಬೇರೆಬೇರೆ ಮಾಡಿದನು..." (ಆದಿಕಾಂಡ 1:4). ಇದರಿಂದ ಹಗಲು ಮತ್ತು ರಾತ್ರಿಗಳು ವಿಭಾಗವಾದವು, ಅದೇರೀತಿ ವಾತಾವರಣವನ್ನು(ಮೂಲ: ಗುಮುಟ, ಆಕಾಶ)ನಿರ್ಮಿಸಿ ಮೇಲಣ(ಮೋಡಗಳು)ನೀರುಗಳನ್ನು, ಕೆಳಗಣ ನೀರುಗಳನ್ನು ಬೇರೆಮಾಡಿದನು(ವಚನ 7).



ಕೆಳಗಣ ನೀರುಗಳನ್ನು ಬೇರೆಬೇರೆ ಮಾಡಿ ಒಂದೇಕಡೆ ಸೇರಿಸಿ, ವಾತಾವರಣವನ್ನು ಅದರಿಂದ ಬೇರೆ ಮಾಡಿದ್ದರಿಂದ ಭೂಮಿಯಲ್ಲಿ ನೀರೆಲ್ಲಾ ಒಂದೇಕಡೆ ಸೇರಿ ಸಾಗರವಾಯಿತು.

ಒಣನೆಲವು ಸಸ್ಯಗಳು ಬೆಳೆಯಲು ಸಹಕಾರಿಯಾಯಿತು, ಮತ್ತು ವಾತಾವರಣವು ಪಕ್ಷಿಗಳು ಹಾರಾಡಲು, ಮೋಡಗಳು ಮಳೆಸುರಿಸಲು, ಮತ್ತು ಮಾನವನ ಜೀವಿತಕ್ಕೆ ಸಹಕಾರಿಯಾಯಿತು. ಅದೇರೀತಿ ಭೂಮಿಯು ಅತ್ಯಧಿಕವಾಗಿ ಜೀವಸಂಕುಲಗಳ ಬೆಳವಣಿಗೆಗೆ ಸಹಕಾರಿಯಾಯಿತು, ಅಂತಿಮವಾಗಿ ಮಾನವನ ಜೀವಿತಕ್ಕೆ ನೆಲೆಯಾಯಿತು. ಎಲ್ಲ ಪ್ರಾಣಿ ಸಂಕುಲಗಳು ಸಸ್ಯಗಳಿಂದ ಆಶ್ರಿತವಾಗಿ ಜೀವ ನಡೆಸುವುದರ ವಿಷಯವನ್ನು ಆದಿಕಾಂಡ 1:29–30ರಲ್ಲಿ ನೋಡಬಹುದಾಗಿದೆ.

## ಎಲ್ಲವೂ ನಿ0ಯಂತ್ರಣದಲ್ಲಿ :

ದೇವರು ಆಕಾಶಮಂಡಲದಲ್ಲಿ ಬೆಳಕುಗಳನ್ನು ಉಂಟುಮಾಡಿದನು, ಅವುಗಳು ಹಗಲು ಮತ್ತು ರಾತ್ರಿಗಳನ್ನು ಬೇರೆಬೇರೆ ಮಾಡುವುದಕ್ಕೂ ಸಮ0ಯಗಳನ್ನು, ದಿನಗಳನ್ನು, ಮಾಸಗಳನ್ನು ತೋರಿಸಲು ಸಹಕಾರಿ0ಯಾಗಿರಲಿ ಎಂದು ನೇಮಿಸಿದನು(ವಚನ 14). ಈ ಕಾರ್0ುವು ದೇವರ ನಿ0ಯಮದಂತೆ ನಡೆ0ಯುತ್ತಿದ್ದು, ದೇವರ ವಾಕ್ಯಕ್ಕೆ ಅನುಗುಣವಾಗಿ ಸೂ0ರ್0ೋದ0ಯ ಮತ್ತು ಸೂ0ರ್0ಾಸ್ತವನ್ನು(ದಿನಗಣನೆಗೆ), ಚಂದ್ರನ ಚಲನೆ0ುಂದ(ತಿಂಗಳುಗಳು), ಅದೇರೀತಿ ಕಾಲಗಳ ಬದಲಾವಣೆಗಳು ಇಂದಿಗೂ ನಡೆ0ಯುತ್ತಿವೆ.




ಆದಿಕಾಂಡ ಮೊದಲ ಅಧ್ಯಾ0ಯದ ಎಲ್ಲಾ ಕಾರ್0ುಗಳು ಒಂದು ವ್ಯವಸ್ಥಿತವಾದ ಚಿತ್ರಣವನ್ನು ಮತ್ತು ದೇವರ ಉದ್ದೇಶವನ್ನು ನಮಗೆ ನೀಡುತ್ತವೆ. ಅದೇನೇಂದರೆ ಈ ಎಲ್ಲ ಕಾರ್0ುಗಳು ಮಾನವನ ಜೀವಿತಕ್ಕೆ ಅನುಕೂಲವಾಗಲು ಸೃಷ್ಟಿಸಿದ ಕಾರ್0ುವಾಗಿದೆ. ಈ ಮೊದಲ ಅಧ್ಯಾ0ಯದ ಕಾರ್0ು ಅಲ್ಲಿಗೆ ಮುಗಿ0ಯುವುದಿಲ್ಲ, ಎರಡನೇ ಅಧ್ಯಾಯದಲ್ಲಿ ಮುಂದುವರೆದು, ಮಾನವನ ವಾಸಕ್ಕೆ ಪರಿಪೂರ್ಣವಾದ ಒಂದು ಸ್ಥಳವನ್ನು ದೇವರು ನಿರ್ಮಿಸಿದ್ದಾನೆ ಅದೇ ಏದೇನ್ ವನವಾಗಿದೆ. ಈ ವನವನ್ನು ಆದಾಮ ಮತ್ತು ಹವ್ವಳು ತಮಗೆ ಇಷ್ಟಬಂದ ರೀತಿ0ಯಲ್ಲಿ ನಿರ್ಮಾಣ ಮಾಡಲಿಲ್ಲ, 0ಯೆಹೋವದೇವರು ಆ ಉದ್ಯಾನವನವನ್ನು ನಿರ್ಮಿಸಿದ್ದನು(ಆದಿಕಾಂಡ 2:8). ಮತ್ತು ಅದರಲ್ಲಿ ನೋಟಕ್ಕೆ ರಮ್ಯವಾಗಿ0ಯೂ, ಊಟಕ್ಕೆ ಅನುಕೂಲವಾಗಿ0ಯೂ ಇರುವ ಎಲ್ಲ ತರದ ಮರಗಳನ್ನು ಆ ಭೂಮಿ0ಯಲ್ಲಿ ಬೆಳೆ0ಯುಮಾಡಿದನು (ವಚನ 9), ಮತ್ತು ವನಕ್ಕೆ ನೈಸರ್ಗಿಕವಾಗಿ ನದಿಗಳಿಂದ ನೀರಿನ ಪೂರೈಕೆ ಆಗುತ್ತಿತ್ತು(ವಚನ10). ದೇವರು ತಾನು ಮಾಡಿದ ಸೃಷ್ಟಿ0ಯ ಬಗ್ಗೆ ವಿಶೇಷ ಆದ್ಯತೆ ಇದ್ದುದರಿಂದ ಇಷ್ಟೆಲ್ಲಾ ಅನುಕೂಲತೆಗಳನ್ನು ಆತನು ಮಾಡಿದನು ಮತ್ತು ಆತನು ಎಲ್ಲವನ್ನೂ ಲೆಕ್ಕಾಚಾರದಿಂದ ತನ್ನ 0ಯೋಜನೆ0ಯಂತೆ ಸೃಷ್ಟಿಮಾಡಿದ್ದಾನೆ (ಕೀರ್ತನೆಗಳು 104:10–31, ಲೂಕ 12:6–7).

ಸೃಷ್ಟಿಕಾರ್0ುವನ್ನು ಸಂಪೂರ್ಣವಾಗಿ ಓದಿದಾಗ ಸೃಷ್ಟಿಕರ್ತನಾದ ದೇವರು ಎಲ್ಲವನ್ನೂ ಬಹಳ ಕಾಳಜಿಯಿಂದ, ವಿಶೇಷ ಆಸಕ್ತಿಯಿಂದ ಉಂಟುಮಾಡಿರುವುದು ತಿಳಿದುಬರುತ್ತದೆ. ಆತನ ಕಾರ್0ುವನ್ನು ನೋಡಿದಾಗ–"ದೇವರು ತಾನು ಉಂಟುಮಾಡಿದ್ದನ್ನೆಲ್ಲಾ ನೋಡಲಾಗಿ ಅದು ಬಹು ಒಳ್ಳೆ0ಯದಾಗಿತ್ತು" (ಆದಿಕಾಂಡ 1:31) ಎಂಬುದಾಗಿ ತಿಳಿಸಿದೆ. ಸತ್ಯವೇದದ ಆದಿಕಾಂಡದಿಂದ ಪ್ರಕಟನೆ ಗ್ರಂಥದವರೆಗೂ ಕನಿಷ್ಠ ಐವತ್ತು ಬಾರಿ0ಯಾದರೂ ದೇವರನ್ನು ಸೃಷ್ಟಿಕರ್ತನೆಂದು ತಿಳಿಸಲಾಗಿದೆ, ಏಕೆಂದರೆ ಆತನೇ ಸೃಷ್ಟಿಕರ್ತನಾಗಿದ್ದಾನೆ ಮತ್ತು ಇಂದಿಗೂ ಮಾನವರನ್ನು ಮತ್ತು ಎಲ್ಲಾ ಜೀವಿಗಳ ಪೋಷಕ ದೇವರೇ ಆಗಿದ್ದಾನೆ, ಮತ್ತು ಲೋಕವನ್ನು ತನ್ನ ಉದ್ದೇಶಕ್ಕಾಗಿ ಸೃಷ್ಟಿಸಿದ್ದಾನೆ.



## ಸೃಷ್ಟಿ0ಯ ಉದ್ದೇಶ

ದೇವರು ತನ್ನ ಸ್ವಂತ ಉದ್ದೇಶದಿಂದ ಈ ಲೋಕವನ್ನು ಸೃಷ್ಟಿಸಿದ್ದಾನೆ, ಆ ಕಾರ್ಯದ ಮುಖ್ಯ ಉದ್ದೇಶವನ್ನು ಪ್ರವಾದಿ0ಯಾದ ಹಬಕ್ಕೂಕನ ಗ್ರಂಥದಲ್ಲಿ ತಿಳಿಸಿದ್ದಾನೆ, "ಸಮುದ್ರದಲ್ಲಿ ನೀರು ಹೇಗೋ ಹಾಗೆ0ಯೇ ಭೂಮಿ0ಯಲ್ಲಿ 0ಯೆಹೋವನ ಮಹಿಮೆ0ಯ ಜ್ಞಾನವು ತುಂಬಿಕೊಂಡಿರುವುದು" (ಹಬಕ್ಕೂಕ 2:14).

ದೇವರ ಉದ್ದೇಶವನ್ನು ಅರಸನಾದ ದಾವೀದನು ತಿಳಿದುಕೊಂಡಿದ್ದನು. ಈ ವಿಷ0ಯವನ್ನು ಕೀರ್ತನೆಗಳು 72:19ರಲ್ಲಿ ನೋಡಬಹುದು–"ಆತನ ಪ್ರಭಾವವುಳ್ಳ ನಾಮಕ್ಕೆ ಸದಾಕಾಲವೂ ಪ್ರಣಾಮವಿರಲಿ; ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿರಲಿ ಆಮೆನ್, ಆಮೆನ್".

ಸತ್ಯವೇದದಲ್ಲಿ ಸೃಷ್ಟಿಕಾರ್0ುವು ಒಂದು ಉದ್ದೇಶದಿಂದ ಉಂಟಾಗಿದೆ ಎಂದು ತಿಳಿಸಿದೆ, ಇದು ದೇವರ ಚಿತ್ತವನ್ನು ತಿಳಿಸಿಕೊಡುತ್ತದೆ. ಇದನ್ನು,

"ಕರ್ತನೇ, ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವುದಕ್ಕೆ 0ಯೋಗ್ಯನಾಗಿದ್ದೀ; ಸಮಸ್ತವನ್ನು ಸೃಷ್ಟಿಸಿದವನು ನೀನೇ; ಎಲ್ಲವೂ ನಿನ್ನ ಚಿತ್ತದಿಂದಲೇ ಇದ್ದವು, ನಿನ್ನ ಚಿತ್ತದಿಂದಲೇ ನಿರ್ಮಿತವಾದವು" (ಪ್ರಕಟನೆ 4:11).

ದೇವರ ಮಹಾ0ಯೋಜನೆ0ಯ ಉದ್ದೇಶದ ಭಾಗವಾಗಿ ಮಾನವರನ್ನು ತನ್ನ ಹೋಲಿಕೆ0ಯಲ್ಲಿ ಉಂಟುಮಾಡಿದನು(ಆದಿಕಾಂಡ 1:26–27). ನಮ್ಮ ಸ್ಥಿತಿ0ಯೇನು ಎಂಬುದನ್ನು ಕೀರ್ತನೆಗಳು 8:4–6ರಲ್ಲಿ ತಿಳಿಸಿದೆ. ಇದರಲ್ಲಿ ಮಾನವರನ್ನು "ದೇವದೂತ"ರಿಗಿಂತ ಸ್ವಲ್ಪವೇ ಕಡಿಮೆ0ಯಾಗಿ ಉಂಟುಮಾಡಿದೆ ಎಂದು ತಿಳಿಸಿದೆ. ಮಾನವನು ಸೃಷ್ಟಿಕರ್ತನಾದ ದೇವರ ಹೋಲಿಕೆ0ಯಲ್ಲಿ ನಿರ್ಮಾಣವಾಗಿರುವುದರಿಂದ ಆತನನ್ನೇ ಪ್ರತಿಫಲಿಸಬೇಕಾಗಿದೆ. ಮಾನವನಿಗೆ ಭೂಮಿ0ಯ ಮೇಲೆ ಎಲ್ಲಾ ಅಧಿಕಾರವನ್ನು ಮತ್ತು ಸೃಷ್ಟಿವಸ್ತುಗಳ ಮೇಲೆ ಜವಾಬ್ದಾರಿ0ಯನ್ನು ಸಹ ನೀಡಿದ್ದಾನೆ, ಆದರೆ ಮಾನವರು ಈ ಲೋಕವನ್ನು ಮಾಲಿನ್ಯಗೊಳಿಸುವುದರ ಜೊತೆಗೆ ಎಲ್ಲವನ್ನೂ ಕೆಡಿಸಿದ್ದಾರೆ.

ಆದರೆ ದೇವರು ಈ ಭೂಮಿ0ಯನ್ನು ಇದೇ ಸ್ಥಿತಿ0ಯಲ್ಲಿ ಬಿಡುವುದಿಲ್ಲ. 0ಯೇಸುಕ್ರಿಸ್ತ ಭೂಲೋಕಕ್ಕೆ ಹಿಂತಿರುಗಿಬಂದು ದೇವರ ರಾಜ್ಯವನ್ನು ಸ್ಥಾಪಿಸುತ್ತಾನೆ. ಆಗ ಭೂಮಿ0ಯ ಎಲ್ಲಾ ಸಮಸ್ಯೆಗಳನ್ನು ತೆಗೆದುಹಾಕುತ್ತಾನೆ. ಈ ವಿಷ0ಯವಾಗಿ ಹಳೆ0ಯ ಒಡಂಬಡಿಕೆಗಳ ಪ್ರವಾದನೆಗಳು ದೇವರ ಮಹಿಮೆ0ಯನ್ನು ಮತ್ತು ಮುಂದೆಬರುವ ಆ 0ಯುಗವನ್ನು ಕುರಿತು ತಿಳಿಸುತ್ತವೆ(0ಯೆಶಾ0ಯ 2:4, 11:1–9, 35:1–8, 40:4–5, 65:17–25).

ದೇವರ ಉದ್ದೇಶದಿಂದ ಸೃಷ್ಟಿಸಲ್ಪಟ್ಟ ಈ ಲೋಕವನ್ನು ಕುರಿತು, ವಿಕಾಸವಾದದ ಮಾನವರು ತಮ್ಮ 0ಯಾವುದೇ ಉದ್ದೇಶವಿಲ್ಲದ ವಿಕಾಸವಾದದಲ್ಲಿ ಸೃಷ್ಟಿಕರ್ತನೇ ಇಲ್ಲ ಎನ್ನುತ್ತಾರೆ, ಆದರೆ ಸೃಷ್ಟಿಕರ್ತನೇ ಇಲ್ಲದಿದ್ದರೆ ನಮ್ಮ ಸುತ್ತಲಿನ ವಿಶ್ವ, ನಮ್ಮ ಭೂಮಿ, ನಮ್ಮ ಜೀವನವೆಲ್ಲಾ ಒಂದು ಕ್ರಮದಲ್ಲಿ ನಡೆ0ಯುವುದರಲ್ಲಿ ಅರ್ಥಹೀನವಾಗುತ್ತದೆ ಅಲ್ಲವೇ! 0ಯಾವುದೇ ಅರ್ಥವಿಲ್ಲದೆ 0ಯೋಜನೆಯಿಲ್ಲದ ಜೀವನದಲ್ಲಿ ಪ್ರ0ಯೋಜನಕ್ಕೆ ಬಾರದ್ದು ಆಗುತ್ತದೆ ಅಲ್ಲವೇ?

ಸತ್ಯವೇದವು ಜೀವದ ಅರ್ಥವನ್ನು ತಿಳಿಸಿಕೊಡುತ್ತದೆ, ಮತ್ತು ಸೃಷ್ಟಿ0ಯಬಗ್ಗೆ, ಸೃಷ್ಟಿ0ಯ ಮಹತ್ವದಬಗ್ಗೆ ತಿಳಿಸಿಕೊಡುತ್ತದೆ. ನಮಗೆ ಸಿಕ್ಕಿರುವ ಮಹತ್ವಪೂರ್ಣ ಅವಕಾಶವೆಂದರೆ, ದೇವರ ಆ ಮಹಾನಿತ್ಯಜೀವದ 0ಯೋಜನೆ0ಯಲ್ಲಿ ಪಾಲುಗಾರರಾಗಬೇಕೆಂದು ಆಹ್ವಾನವನ್ನು ಸತ್ಯವೇದದ ಮೂಲಕ ನೀಡಿದ್ದಾನೆ.

**–ಜಾನ್ ಹೆಲಾವೆಲ್**

# ನಹೂಮನ ನಿನವೆ

## ಬ್ರಿಟಿಷ್ ಮ್ಯೂಸಿಯಂನಲ್ಲಿ ದಿಟ್ಟಿಸಿನೋಡುವಂತಹ ವಸ್ತುಗಳು

### *ಸತ್ಯವೇದದ ಪ್ರವಾದನೆಗಳ ಪರಿಪೂರ್ಣತೆಯು ಪರೀಕ್ಷಿಸುವಿಕೆ*

ಸತ್ಯವೇದದ ವಿದ್ಯಾರ್ಥಿಯೊಬ್ಬನಿಗೆ ಲಂಡನ್ ನಲ್ಲಿ ಅತ್ಯಂತ ಮಹತ್ವಪೂರ್ಣ ಸ್ಥಳವೆಂದರೆ "ಬ್ರಿಟಿಷ್ ಮ್ಯೂಸಿಯಮ್"ಆಗಿದೆ ಎಂದು ನಿಶ್ಸಂಶಯವಾಗಿ ಹೇಳಬಹುದು. ಅದೇರೀತಿ ಒಬ್ಬ ಅಪನಂಬಿಕಸ್ತನಿಗೂಸಹ ಬ್ರಿಟಿಷ್ ಮ್ಯೂಸಿಯಮ್ ಮಹತ್ತರವಾದ ಸ್ಥಳವಾಗಿದೆ, ಏಕಂದರೆ ಬ್ರಿಟಿಷ್ ಮ್ಯೂಸಿಯಮ್ ನಲ್ಲಿ ಒಬ್ಬ ಸತ್ಯವೇದದಲ್ಲಿ ನಂಬಿಕೆ ಇರದವನು ಬೇಟಿಕೊಟ್ಟರೆ ಅಲ್ಲಿ ಪ್ರಪಂಚದ ಪ್ರಮುಖ ಇತಿಹಾಸದ ಸಾಕ್ಶ್ಯಗಳನ್ನು ಜೋಡಿಸಲಾಗಿದೆ, ಮತ್ತು ಅವುಗಳಿಂದ ಸತ್ಯವೇದ ಸತ್ಯವಾದುದಾಗಿದೆ ಎಂಬುದನ್ನು ತಿಳಿಯಬಹುದಾಗಿದೆ. ಜೊತೆಗೆ ಬ್ರಿಟಿಷ್ ಮ್ಯೂಸಿಯಮ್ ನಲ್ಲಿ ಇತಿಹಾಸ ಪರಿಕರಗಳನ್ನು ಶೇಖರಿಸಲಾಗಿದೆ ಮತ್ತು ಅನೇಕ ಶತಮಾನಗಳಿಂದ ದೃಢಪಟ್ಟ ದಾಖಲೆಗಳಿವೆ, ಇವುಗಳಲ್ಲಿ ಸತ್ಯವೇದದ ಪ್ರವಾದನೆಗಳು ನಿಜವಾದವುಗಳಾಗಿವೆ ಎಂಬುದನ್ನು ಸಾಕ್ಷೀಕರಿಸುತ್ತವೆ.



ಬ್ರಿಟಿಷ್ ಮ್ಯೂಸಿಯಮ್ ಗ್ಯಾಲರಿಗಳನ್ನು ಪ್ರತಿವರ್ಷ ಸರಿಸುಮಾರು ಏಳು ಮಿಲಿಯನ್ ಜನರು ವೀಕ್ಷಿಸುತ್ತಾರೆ. ಮ್ಯೂಸಿಯಮ್ ನ ನೆಲ ಅಂತಸ್ತಿನ ಪಶ್ಚಿಮ ಭಾಗದಲ್ಲಿ ಈಜಿಪ್ಟ್, ಅಸ್ಸೀರಿಯಾ, ಗ್ರೀಸ್, ಮತ್ತು ರೋಮ್ ಸಾಮ್ರಾಜ್ಯಗಳ ಇತಿಹಾಸ ಪರಿಕರಗಳಿಂದ ತುಂಬಿದೆ. ಪೂರ್ವಭಾಗ ದಲ್ಲಿ ಬಹಳ ಮಹತ್ವಪೂರ್ಣವಾದ ಸತ್ಯವೇದದ ಪುರಾತನ ಹಸ್ತಪ್ರತಿಗಳ ಸಂಗ್ರಹವೇ ಇದೆ. ಇವುಗಳು ಸತ್ಯವೇದದ ಗೌರವವನ್ನು ಹೆಚ್ಚಿಸಿವೆ, ಇಲ್ಲಿಗೆ ಬೇಟಿನೀಡುವ ಪ್ರತಿ ಪ್ರವಾಸಿಯು ಸಹ ಇವುಗಳನ್ನು ಸ್ವತಃ ನೋಡಬಹುದಾಗಿದೆ ಮತ್ತು ಸತ್ಯವೇದವು ನಿಜವಾಗಿಯೂ ದೇವರಿಂದ ಬರೆಸಲ್ಪಟ್ಟಿದ್ದು ಅದರ ಸಂದೇಶಗಳು ಸತ್ಯವಾಗಿವೆ ಎಂಬುದನ್ನು ತಿಳಿಯಬಹುದಾಗಿದೆ.

ಉದಾಹರಣೆಗೆ–ಅಶ್ಶೂರದ ಗ್ಯಾಲರಿಯನ್ನು ತೆಗೆದುಕೊಂಡರೆ, ಅಶ್ಶೂರಮಹಾ ಸಂಸ್ಥಾನದ ಅರಸನಾದ ತಿಗ್ಲತ್ಪಿಲೆಸರನ ಕಾಲದ ದೊಡ್ಡ ಗೋಡೆಯಲ್ಲಿ ಕೆತ್ತಿರುವ ಶಾಸನದ ಕಲ್ಲು ಇದೆ, ಇದರಲ್ಲಿ ಅಶ್ಶೂರದ ರಾಜನಾದ ತಿಗ್ಲತ್ಪಿಲೆಸರ, ಸರ್ಗೋನ, ಸನ್ಹೇರೀಬ ಮತ್ತು ಅಸನೆಚ್ಚರರ ಬಗ್ಗೆ ಚಿತ್ರಸಹಿತ ವಿವರಣೆ ಇದೆ. ಈ ಶಾಸನ ಕೇವಲ ಅದರ ಕೆತ್ತನೆಯಿಂದ ನಯನಮನೋಹರವಾಗಿರುವುದು ಮಾತ್ರವಲ್ಲ, ಅಂದಿನ ಕೆಲಸಗಾರರು ಹೇಗೆ ಬುಲ್ಡೋಜರ್ ಗಳು, ಕ್ರೇನ್ ಮತ್ತು ಇತರೆ ಯಂತ್ರೋಪಕರಣಗಳಿಲ್ಲದ ಕಾಲದಲ್ಲೂ ಭೌತವಿಜ್ಞಾನವನ್ನು ಬಳಸಿ, ರಾಟೆಗಳ ಮುಖಾಂತರ, ಚಕ್ರಗಳು ಮತ್ತು ಇತರೆ ಮಾನವಚಾಲಿತ ಯಂತ್ರಗಳ ಮೂಲಕ ಕಾರ್ಯನಡೆಸಿದರು ಎಂಬುದು ಆಶ್ಚರ್ಯಕರ ಸಂಗತಿಯೇ ಆಗಿದೆ.

ಆ ಕಲ್ಲಿನ ಗೋಡೆಯ ಮಧ್ಯಭಾಗದಲ್ಲಿ ಬಹುಪ್ರಖ್ಯಾತಿಪಡೆದ ಒಂದು ಶಾಸನವಿದ್ದು ಅದರಲ್ಲಿ ಅರಸನಾದ ಸಲ್ಮನೆಸರ್ ಕ್ರಿ.ಪೂ.860–825ರ ಮುವತ್ತೈದು ವರ್ಷಗಳ ಅವಧಿಯ ಆಳ್ವಿಕೆಯನ್ನು, ಆತ ರಾಜ್ಯ ವಿಸ್ತರಣೆ ಮಾಡಿರುವುದನ್ನೂ, ಬೇರೆಯ ಅರಸರುಗಳು ಆತನಿಗೆ ಅಧೀನವಾದ ವಿಚಾರಗಳನ್ನು ಚಿತ್ರಸಹಿತ ವಿವರಣೆ ನೀಡುತ್ತದೆ. ಆ ಶಾಸನದಲ್ಲಿ ಇಸ್ರಾಯೇಲ್ ದುಷ್ಟರಾಜನಾದ ಯೇಹು ಅಶ್ಶೂರರಾಜನಿಗೆ



ಅಡ್ಡಬಿದ್ದಿರುವುದನ್ನು(ಹಿಂದಿನ ಪುಟದ ಚಿತ್ರ) ನೋಡಬಹುದಾಗಿದೆ. ಈ ವಿವರಣೆ ಸತ್ಯವೇದದಲ್ಲಿ ಯೇಹುವಿನ ಬಗ್ಗೆ ತಿಳಿಸಿದೆ, ಆತ ದೇವರಿಗೆ ಅವಿಧೇಯನಾಗಿ ನಡೆದದ್ದರಿಂದ ದೇವರು ಇಸ್ರಾಯೇಲ್ಯರನ್ನು ಕುಗ್ಗಿಸತೊಡಗಿದನು, ಇಸ್ರಾಯೇಲ್ಯರಿಗೆ ವಿರೋಧವಾಗಿ ಹಜಾಯೇಲನನ್ನು ಬರಮಾಡಿ ಇಸ್ರಾಯೇಲ್ಯರಿಗೆ ಶಿಕ್ಷೆ ವಿಧಿಸಿದನು. ಇದನ್ನು 2ಅರಸು 10:31–32ರಲ್ಲಿ ನೋಡಬಹುದು. ಹಜಾಯೇಲನನ್ನು ಕುರಿತು ಅಸ್ಸೂರದ ಶಾಸನದಲ್ಲಿ ಬರೆಯಲ್ಪಟ್ಟಿದೆ.

## ಸನ್ಹೇರೀಬನ ಲಾಖೀಷ್ ಕೋಣೆ :

ಅಶ್ಶೂರದ ಪುರಾತನ ಶಾಸನಗಳ ಕೊಠಡಿಯ ಮೂಲೆಯಲ್ಲಿ ಪತ್ಯೇಕವಾದ ಲಾಖೀಷನ ಒಂದು ಕೋಣೆಯಿದೆ. ಅದರ ಗೋಡೆಗಳು ಕಲ್ಲಿನ ಚಿತ್ರ ಪಟಗಳಿಂದ ಸುತ್ತುವರೆಯಲ್ಪಟ್ಟಿದ್ದು, ಆ ಗೋಡೆಯ ಚಪ್ಪಡಿಗಳಲ್ಲಿ ಸನ್ಹೇರೀಬ ಹೇಗೆ ಆಕೀಷನ ಮೇಲೆ ಆಕ್ರಮಣಮಾಡಿದ, ಮತ್ತು ಯೆಹೂದ್ಯರ ಅರಸನಾದ ಹಿಜ್ಕಿಯನಿಗೆ ತನ್ನ ಸೇವಕನಾದ ರಬ್ಷಾಕೆಯ ಮುಖಾಂತರ ತನ್ನ ಆಜ್ಞೆಯನ್ನು ತಿಳಿಸಿರುವ ವಿಚಾರವಿದೆ. ಇದೇ ವಿಷಯದ ಸಂಪೂರ್ಣ ವಿವರಣೆಯನ್ನು ಸತ್ಯವೇದದ 2ಅರಸುಗಳು 18ನೇ ಅಧ್ಯಾಯದಲ್ಲಿ ನೋಡಬಹುದು.

ನಮ್ಮ ಈ ಅಧ್ಯಯನದಲ್ಲಿ ಅಶ್ಶೂರದ ಗ್ಯಾಲರಿಗಳನ್ನು ಉದಾಹರಣೆಯಾಗಿ ತೆಗೆದುಕೊಂಡು ಇತಿಹಾಸವನ್ನು ತಿಳಿಸುವುದು ಮಾತ್ರವಲ್ಲ. ಸತ್ಯವೇದದ ಪ್ರವಾದನೆಗಳು ಎಷ್ಟೊಂದು ಆಶ್ಚರ್ಯಕರವಾದ, ಅದ್ಭುತವಾದ ಮತ್ತು ನಿಖರವಾದ ಪ್ರವಾದನೆಗಳಾಗಿವೆ ಎಂಬುದನ್ನು ತಿಳಿಸಿಕೊಡುವುದೇ ಆಗಿದೆ.

ಈ ಮ್ಯೂಸಿಯಂಗೆ ಬೇಟಿಕೊಟ್ಟ ಪ್ರವಾಸಿಗ ಅಥವಾ ವೀಕ್ಷಕ ಅಸ್ಸೀರಿಯಾ ರಾಜ್ಯ ಮತ್ತು ರಾಜರುಗಳು ಹೇಗೆ ಪ್ರವರ್ದಮಾನಕ್ಕೆ ಬಂದರು? ಅವರ ಕ್ರೂರತ್ವ ಮತ್ತು ಅವರು ಇಸ್ರಾಯೇಲ್ ರಾಜ್ಯವನ್ನು ಅಕ್ರಮಣಮಾಡಿ ತಮ್ಮ ವಶಕ್ಕೆ ತೆಗೆದುಕೊಂಡ ವಿಷಯವನ್ನು ತಿಳಿದುಕೊಳ್ಳುತ್ತಾನೆ. ಇಸ್ರಾಯೇಲ್ಯರಿಗೆ ಈ ಸ್ಥಿತಿ ಬರಲು ಕಾರಣವೆಂದರೆ; ಇಸ್ರಾಯೇಲ್ಯರು (ಯೆಹೂದ್ಯರು) ಯೆಹೋವದೇವರ ಸ್ವಕೀಯ ಜನಾಂಗವಾಗಿದ್ದು, ಅವರನ್ನು ಈಜಿಪ್ಟ್ ದೇಶದ ದಾಸತ್ವದಿಂದ ಬಿಡುಗಡೆ ಮಾಡಿ ಇಸ್ರಾಯೇಲ್ ದೇಶಕ್ಕೆ ಬರಮಾಡಿ ಅವರಿಗೆ ಸ್ವತಂತ್ರದೇಶ ಕೊಟ್ಟು ಜೀವಿಸುವಂತೆ ಮಾಡಿದ್ದನು. ಆದರೆ ಕಾಲಕ್ರಮೇಣ ಇಸ್ರಾಯೇಲ್ಯರು ಯೆಹೋವದೇವರ ಮಾರ್ಗವನ್ನು ಬಿಟ್ಟು ಅನ್ಯಮಾರ್ಗಕ್ಕೆ ಹೋದದರಿಂದ ದೇವರು ಅವರನ್ನು ಕೈಬಿಟ್ಟನು. ಇಸ್ರಾಯೇಲ್ಯರು ಯೆಹೋವ ದೇವರನ್ನು ನಂಬಿರುವ ಜನರಾಗಿದ್ದರು, ಆದರೆ ಅಸ್ಸೀರಿಯನ್ನರು ಅದಕ್ಕೆ ವಿರುದ್ಧವಾಗಿ ತಮ್ಮ ಶಕ್ತಿ ಮತ್ತು ಐಶ್ವರ್ಯವನ್ನು ನಂಬಿದವರಾಗಿದ್ದರು. ಈ ವಿಷಯವನ್ನು ಯೆಶಾಯ 10:13ರಲ್ಲಿ ಈ ರೀತಿಯಾಗಿ ದೇವರು ತಿಳಿಸಿದ್ದಾನೆ:

"ಅವನು ತನ್ನೊಳಗೆ–ನನ್ನ ಜ್ಞಾನ ಭುಜಬಲಗಳಿಂದಲೇ ಇದನ್ನು ಮಾಡಿದ್ದೇನೆ, ನಾನೇ ವಿವೇಕಿ; ಜನಾಂಗಗಳ ಎಲ್ಲೆಗಳನ್ನು ಕಿತ್ತು ಅವರ ನಿಧಿನಿಕ್ಷೇಪಗಳನ್ನು ಸೂರೆಮಾಡಿ ಸಿಂಹಾಸನಾರೂಢರನ್ನು ಮಹಾವೀರನಂತೆ ಕೆಡವಿಬಿಟ್ಟಿದ್ದಾನೆ."

ಈ ರೀತಿಯಾಗಿ ಅಶ್ಶೂರ ಅರಸನು ಗರ್ವಪಟ್ಟ ಕಾರಣದಿಂದ, ಅಶ್ಶೂರ್ಯರು ನಾಶವಾಗಿ ಹೋಗುತ್ತಾರೆ ಎಂದು ಯೆಹೋವದೇವರು ಪ್ರವಾದಿಯಾದ ಯೆಶಾಯನ ಮುಖಾಂತರ ಪ್ರವಾದನೆಯನ್ನು ತಿಳಿಸಿದ್ದಾನೆ. ಇದನ್ನು ಯೆಶಾಯ 10:12 ಮತ್ತು 16ರಲ್ಲಿ ನೋಡಬಹುದು:

"ಆದಕಾರಣ ಕರ್ತನಾದ ನಾನು ಚಿಯೋನ್ ಪರ್ವದಲ್ಲಿಯೂ, ಯೆರುಸಲೇಮಿನಲ್ಲಿಯೂ ನನ್ನ ಉದ್ದೇಶವನ್ನೆಲ್ಲಾ ನೆರವೇರಿಸಿದ ಮೇಲೆ ಅಶ್ಶೂರದ ರಾಜನ ಉಬ್ಬಟೆಯ ಕೊಬ್ಬು ಮತ್ತು ಗರ್ವದೃಷ್ಟಿಯ ಮೆರೆದಾಟಕ್ಕೂ ತಕ್ಕ ದಂಡನೆಯನ್ನು ಮಾಡುವೆನು.....ಆದಕಾರಣ ಸೇನಾಧೀಶ್ವರನಾದ ಯೆಹೋವನೆಂಬ

ಕರ್ತನು ಅವನ ಕೊಬ್ಬಿದ ಪ್ರಜೆಗಳಿಗೆ ಕ್ಷಯವನ್ನುಂಟುಮಾಡುವೆನು; ದಹಿಸುವ ಅಗ್ನಿಯಂತಿರುವ ಉರಿಯೊಂದು ಅವನ ವೈಭವದ ಕೆಳಗೆ ಹತ್ತಿಕೊಳ್ಳುವುದು'' (ಯೆಶಾಯ 10:12, 16).

## ಯೋನನ ಮುಖಾಂತರ ಪಶ್ಚಾತ್ತಾಪ ಪಟ್ಟು ತಿರುಗಿಕೊಳ್ಳಲು ಕರೆ:

ದೇವರು ಕೃಪಾಪೂರ್ಣನಾಗಿರುವುದರಿಂದ, ತನ್ನ ಸೇವಕ ಪ್ರವಾದಿಯಾದ ಯೋನನ ಮುಖಾಂತರ ಅಶ್ಶೂರದ ನಿನವೆ ಪಟ್ಟಣದ ಜನರಿಗೆ ಪ್ರವಾದನೆಯನ್ನು ತಿಳಿಸಿ ಅವರು ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ತಪ್ಪನ್ನು ತಿದ್ದಿಕೊಂಡು ದೇವರಕಡೆಗೆ ತಿರುಗುವಂತೆ ತಿಳಿಸಿದನು, ಆತನ ವಾಕ್ಯಕ್ಕೆ ಅನುಗುಣವಾಗಿ ಅಂದಿನ ಜನತೆ ದೇವರಕಡೆಗೆ ತಿರುಗಿಕೊಂಡದರಿಂದ, ಬರುವ ಕೇಡಿನಿಂದ ತಪ್ಪಿಸಿಕೊಂಡರು. ಆದರೆ ಅವರ ಈ ವಿಧೇಯತೆಯ ಜೀವಿತ ಬಹಳಕಾಲದವರೆಗೆ ಇರಲಿಲ್ಲ, ಮತ್ತೆ ತಮ್ಮ ಹಳೆಯ ಚಾಳಿಗೆ ಹಿಂತಿರುಗಿ ಪಾಪ ಕಾರ್ಯಗಳಲ್ಲಿ ನಿನವೆಯ ಜನ ನಿರತರಾದರು. ಆ ಸಂದರ್ಭದಲ್ಲಿ ಯೆಹೋವದೇವರು ಆ ಸಾಮ್ರಾಜ್ಯಕ್ಕೆ ಎಚ್ಚರಿಕೆಯನ್ನು ಮತ್ತೊಬ್ಬ ಪ್ರವಾದಿಯಾದ ನಹೂಮನ ಮುಖಾಂತರ ಕೊಟ್ಟಿದ್ದಾನೆ. ನಹೂಮನು ನಿನವೆಗೆ ಎಚ್ಚರಿಕೆಯನ್ನು ನೀಡಿ "ರಕ್ತಮಯ ಪಟ್ಟಣ'' ಎಂದು ತಿಳಿಸಿದ್ದಾನೆ, ನಹೂಮನ ಪ್ರವಾದನೆಯಂತೆ ಕ್ರಿ.ಪೂ 623ರ ಹೊತ್ತಿಗೆ ನಿನವೆ ರಕ್ತಪಾತಕ್ಕೆ ಗುರಿಯಾಯಿತು.

ಈ ಸಂದರ್ಭದಲ್ಲಿ ನಾವು ನಿನವೆಯ ಬಗ್ಗೆ ಸ್ವಲ್ಪ ತಿಳಿದುಕೊಳ್ಳಬೇಕಾಗಿದೆ. ನಿನವೆಯು ಒಂದು ಸಾಮಾನ್ಯವಾದ, ಮರಳುಗಾಡಿನಲ್ಲಿ ಮಂಕಾದ ಓಯಸಿಸ್ ನ ರೀತಿಯ ಚಿಕ್ಕದಾದ ಪಟ್ಟಣವಾಗಿರಲಿಲ್ಲ. ಇದೊಂದು ಮಹಾಪಟ್ಟಣವಾಗಿತ್ತು. ಆ ಕಾಲದ ವಿಶ್ವದ ಮೂರು ಪ್ರಮುಖ ಪಟ್ಟಣಗಳಲ್ಲಿ ಒಂದು ನಗರ ನಿನವೆಯಾಗಿತ್ತು, ಟೈಗ್ರಿಸ್ ನದಿಯ ದಂಡೆಯಮೇಲೆ ಕಟ್ಟಲ್ಪಟ್ಟಿದ್ದು, ನಿನವೆಯು ವ್ಯಾಪಾರ ವಹಿವಾಟಿಗೆ ಉನ್ನತವಾದ ಹೆಸರನ್ನು ಪಡೆದಿತ್ತು. ಈ ವಿಷಯವಾಗಿ ಪ್ರವಾದಿಯಾದ ನಹೂಮನು ತಿಳಿಸುತ್ತಾ,ಯಾವ


Nimrud the base of Tiglath Pileser

ನದಿಯನ್ನು ನಿನವೆ ಆಶ್ರಯಿಸಿಕೊಂಡಿದೆಯೋ ಅದರಿಂದಲೇ ನಾಶವಾಗುತ್ತದೆ ಎಂದು ಪ್ರವಾದನೆ ತಿಳಿಸಿದ್ದಾನೆ.

"ಆದರೆ ತುಂಬಿತುಳುಕುವ ಜಲಪ್ರವಾಹದಿಂದಲೋ ಎಂಬಂತೆ ನಿನವೆಯ ಸ್ಥಾನವನ್ನು ತೀರಾ ಹಾಳುಮಾಡಿ ತನ್ನ ವಿರೋಧಿಗಳನ್ನು ಹಿಂದಟ್ಟಿಅಧಿಕಾರಕ್ಕೆ ತಳ್ಳುವನು'' (ನಹೂ 1:18).

ಅಶ್ಶೂರ್ಯರ ಮತ್ತೊಂದು ಬಲಹೀನತೆ ಮದ್ಯಪಾನ(ಕುಡಿತ)ವಾಗಿತ್ತು ಎಂಬುದು ನಹೂಮನಿಗೆ ತಿಳಿದಿತ್ತು. ಮದ್ಯಪಾನ ಮಾಡುವುದು ಒಂದು ಅಲಂಕಾರ ಮತ್ತು ಬಿರುದು ಬಂದಂತೆ ಎಂದು ಅಶ್ಶೂರ್ಯರ ಅರಸರು ನೆನಸಿದ್ದರು. ಇದನ್ನು ಅರಸನಾದ ಅಸುರ್ ಬಾನಿಪಾಲನು ಮದ್ಯಪಾನ ಮಾಡುತ್ತಿರುವ ಚಿತ್ರವಿರುವ ಶಾಸನವನ್ನು ಬ್ರಿಟಿಷ್ ಮ್ಯೂಸಿಯಂನಲ್ಲಿ ನೋಡಬಹುದು. ಆದರೆ ಈ ಬಲಹೀನತೆಯೇ ಅಶ್ಶೂರ್ಯರಿಗೆ ಮುಳುವಾಗಿ ನಾಶನ ಉಂಟಾಗುತ್ತದೆ ಎಂದು ಪ್ರವಾದಿಯಾದ ನಹೂಮ ಎಚ್ಚರಿಸಿದ್ದಾನೆ.

"ಆತನ ವೈರಿಗಳು ಮುಳ್ಳುಗಳಂತೆ ಹೆಣೆದುಕೊಂಡಿದ್ದರೂ, ತಮ್ಮ ಮದ್ಯದಲ್ಲಿ ಮುಳುಗಿದ್ದರೂ ತುಂಬಾ ಒಣಗಿದ ಕೂಳೆಯಂತೆ ಬೆಂಕಿಗೆ ತುತ್ತಾಗುವರು'' (ನಹೂಮ 1:10). "ನೀನು ಓಲಾಡುವಿ, ಬಳಲಿ ಹೋಗುವಿ; ನೀನು ಶತೃವಿನ ನಿಮಿತ್ತ ಆಶ್ರಯವನ್ನು ಹುಡುಕುವಿ'' (ನಹೂಮ 3:11).



## ಸಾಕ್ಷ್ಯಗಳು ಸಾಕ್ಷೀಕರಿಸುತ್ತವೆ:

ನಹುಮನ ಪ್ರವಾದನೆ ಪರಿಪೂರ್ಣವಾಗಿರುವುದಕ್ಕೆ ಎರಡು ಪ್ರಮುಖ ಸಾಕ್ಷ್ಯಗಳಿವೆ. ಅವುಗಳೆಂದರೆ ಪ್ರಾಚೀನ ವಸ್ತು ಸಂಶೋಧನಾ ಶಾಸ್ತ್ರ(ಆರ್ಕಿಯಾಲಜಿ) ಮತ್ತು ಪುರಾತನ ಚರಿತ್ರಕಾರರು. ಕ್ರಿ.ಪೂ. ಮೊದಲ ಶತಮಾನದಲ್ಲಿ ಜೀವಿಸಿದ್ದ ಡಿಯೋಡಾರಸ್ ಸಿಕ್ಯುಲಸ್ ನ 40 ಸಂಪುಟದ "ಬಿಬಿಲಿಕಾ ಹಿಸ್ಟಾರಿಕಾ'' ಗ್ರಂಥವು ನಿನವೆಯ ಘಟನೆಗಳ ಬಗ್ಗೆ ವಿವರವಾಗಿ ತಿಳಿಸಿಕೊಡುತ್ತದೆ ಮತ್ತು ಎಸಿಬಿಯಸ್ ನ ಪ್ರಖ್ಯಾತ ಗ್ರಂಥವಾದ "ಕ್ರಾನಿಕಲ್ಸ್ ಆಫ್ ವರ್ಲ್ಡ್ ಹಿಸ್ಟರಿ'' ಗ್ರಂಥವು ಸಹ ವಿವರಣೆ ನೀಡುತ್ತದೆ. ಜೊತೆಗೆ ಕ್ರಿ.ಪೂ.5ನೇ ಶತಮಾನದಲ್ಲಿ ಜೀವಿಸಿದ್ದ ಪ್ರಖ್ಯಾತ ಇತಿಹಾಸಕಾರ ಹೆರೋಡಾಟಸ್ ಸಹ ಮೇಲಿನ ವಿಷಯವನ್ನು ತಿಳಿಸಿದ್ದಾನೆ. ಮುಂದುವರೆದು ಕ್ರಿ.ಶ. 37 ರಿಂದ 100ರ ಅವಧಿಯಲ್ಲಿ ಪ್ರಖ್ಯಾತ ಸಂಶೊಧನಾಕಾರನಾಗಿದ್ದ ಜೋಸೆಫಸ್ ಸಂಶೋಧಿಸಿ ನಹೂಮನಲ್ಲಿ ಬರೆಸಿರುವ ಸಂಗತಿ ಸತ್ಯವಾಗಿದೆ ಎಂದು ತಿಳಿಸಿದ್ದಾನೆ, ಅವನ ಈ ಸಂಶೋಧನೆಯನ್ನು 1730ರಲ್ಲಿ ಪ್ಯಾರೀಸ್ ವಿಶ್ವವಿದ್ಯಾನಿಲಯದ ಪ್ರಾಂಶುಪಾಲರಾದ ಚಾರ್ಲ್ಸ್ ರೋಲಿನ್ ರವರು ಮುಂದುವರೆಸಿ "ಪುರಾತನ ಇತಿಹಾಸ'' (ಏನ್ಸಿಯಂಟ್ ಹಿಸ್ಟರಿ) ಎಂಬ ಗ್ರಂಥದಲ್ಲಿ ನಮೂದಿಸಿದ್ದಾರೆ. ಮತ್ತು 1847ರಲ್ಲಿ ಅಲೆಗ್ಸಾಂಡರ್ ಕೀತ್ ಎಂಬುವರು "ಎವಿಡೆನ್ಸ್ ಆಫ್ ದ ಟ್ರೂತ್ ಆಫ್ ದ ಕ್ರಿಶ್ಚಿಯನ್ ರಿಲಿಜಿಯನ್'' ಎಂಬ ಗ್ರಂಥದಲ್ಲಿ ನಿನವೆಯ ಸಂಗತಿಯು ಸತ್ಯವೆಂದು ಸಾಕ್ಷೀಕರಿಸಿದ್ದಾರೆ.


Ashurbanipal: a Weakness for Drink!

ಎಲ್ಲರೂ ಇತಿಹಾಸದ ಎಲ್ಲಾ ವಿಷಯಗಳನ್ನು ನಿಜವೆಂದು ಒಪ್ಪಿಕೊಳ್ಳಲು ತಯಾರಿರುವುದಿಲ್ಲ, ಆದರೆ ಸತ್ಯವೇದವು ಬಹಳ ಸಮೃದ್ಧಿಯಾದ ಇತಿಹಾಸದ ವಿಷಯಗಳನ್ನು ಸ್ಥಿರಗೊಳಿಸುತ್ತದೆ. ಅಶ್ಶೂರದ ಹತ್ತಿರದ ಸಾಮ್ರಾಜ್ಯವಾದ ಬ್ಯಾಬಿಲೋನ್ ಸಂಸ್ಥಾನಗಳ ನಾಯಕರುಗಳು ಬ್ಯಾಬಿಲೋನ್ ನ ಅರಸನಾದ ಮೇದ್ಯನಾದ ಕೋರೆಷನನ್ನು ನಿನವೆಯ ವಿರುದ್ಧ ಯುದ್ಧಮಾಡುವ ಹಾಗೆ ಪ್ರೇರೇಪಿಸಿ, ಸೈನ್ಯದ ಮುಖ್ಯಸ್ಥನಾದ ಅರಾಬ್ಯಾಕಸನ ನಾಯಕತ್ವದಲ್ಲಿ ನಿನವೆಯನ್ನು ನಾಶಮಾಡಿದರು ಎಂದು ಜೋಸೆಫಸ್ ದೃಢೀಕರಿಸಿದ್ದಾನೆ. ಇದೇ ವಿಷಯವಾಗಿ ಖ್ಯಾತ ಇತಿಹಾಸಕಾರ ಹೆರೋಡಾಟಸ್ ಕೂಡ ತಿಳಿಸಿಕೊಟ್ಟಿದ್ದಾನೆ.

ಚಂಡಮಾರುತದ ಪ್ರಭಾವದಿಂದಾಗಿ ಒಮ್ಮೆ ಟೈಗ್ರಿಸ್ ನದಿಯಲ್ಲಿ ಮಹಾಪ್ರವಾಹ ಉಂಟಾಗಿತ್ತು. ಈ ವಿಷಯವಾಗಿ ಸಂಶೊಧಕನಾದ ಡಿಯೋಡಾರಸ್ ಈ ರೀತಿ ತಿಳಿಸಿದ್ದಾನೆ: ಈ ರೀತಿಯ ಪ್ರವಾಹವನ್ನು ಕುರಿತು ಸತ್ಯವೇದದಲ್ಲಿ ಮುಂಚಿತವಾಗಿ ಪ್ರವಾದನೆ ತಿಳಿಸಿದೆ, ಹೇಗಂದರೆ ನಿನವೆಯು ಸಂಪೂರ್ಣವಾಗಿ ನಚ್ಚಿಕೊಂಡಿರುವ ನದಿಯೇ ಅದಕ್ಕೆ ವಿರುದ್ಧವಾಗುತ್ತದೆ ಎಂಬುದು. ಅದೇರೀತಿ ನಿನವೆಯು ಮುತ್ತಿಗೆಯಾದ ಮೂರನೇ ವರ್ಷದಲ್ಲಿ ಅತ್ಯಧಿಕ ಮಳೆಯಿಂದ ನದಿಯಲ್ಲಿ ಮಹಾಪ್ರವಾಹ ಉಂಟಾಗಿ ನಿನವೆ ಪಟ್ಟಣದ ಪೌಳಿಗೋಡೆ ಇಪ್ಪತ್ತು ಫರ್ಲಾಂಗುಗಳ ದೂರ ಕುಸಿದುಬಿದ್ದಿತು, ಇದರಿಂದ ಅರಸನು ಪ್ರವಾದನೆ ಪರಿಪೂರ್ಣವಾಯಿತೆಂದು ತಿಳಿದುಕೊಂಡು, ಅರಮನೆಯಲ್ಲಿ ತನ್ನ ಜ್ಞಾಪಕ ಸ್ತಂಭವನ್ನು ನಿಲ್ಲಿಸಿ, ತನ್ನ

ಎಲ್ಲಾ ಐಶ್ವರ್ಯವನ್ನೂ, ರಾಣಿಯರನ್ನು, ಉಪಪತ್ನಿಯರನ್ನೂ, ತನ್ನನ್ನು ಮತ್ತು ಅರಮನೆಗೆ ಎಲ್ಲಕ್ಕೂ ಬೆಂಕಿ ಹೊತ್ತಿಸಿ ಆತ್ಮಹತ್ಯೆ ಮಾಡಿಕೊಂಡು ಹತನಾದನು.

ನಹೂಮನ ಪ್ರವಾದನೆಯ ಗ್ರಂಥ 2:9 ಮತ್ತು 3:9ರಲ್ಲಿ ತಿಳಿಸಿರುವಂತೆ, ನಿನವೆಯು ನಾಶವಾಗಿಹೋಯಿತು. ಡಿಯೋಡಾರಸ್ ಮುಂದುವರೆದು ತಿಳಿಸಿಕೊಡುತ್ತಾನೆ –ಅಶ್ಯೂರ್ಯರು ತಮ್ಮ ಹಿಂದಿನ ವಿಜಯಗಳ ಸಂಭ್ರಮದಲ್ಲಿ ಮೈಮರೆತು ಕುಡಿತದಲ್ಲಿ ತಲ್ಲೀನರಾಗಿರುವ ಸಂದರ್ಭದಲ್ಲಿ ಅರಾಬ್ಯಾಕಸ್ ರಾತ್ರಿವೇಳೆಯಲ್ಲಿ ಅಕ್ರಮಣಮಾಡಿ ಸಂಪೂರ್ಣ ನಾಶಮಾಡಿದನು.

ಮತ್ತು, ಇದು ಪ್ರವಾದನೆಯೇ ಆಗಿದೆ, ಇದನ್ನು ನಾವು ನಹೂಮ 3:11ರಲ್ಲಿ ನೋಡಬಹುದು.

## ನೋಡಿ ನಂಬಿರಿ:

ಅನೇಕ ಇತಿಹಾಸಕಾರರಾಗಿರಬಹುದು ಅಥವಾ ಸತ್ಯವೇದದಲ್ಲಿ ನಂಬಿಕೆಯಿಲ್ಲದವರು ಆಗಿರಬಹುದು, ಪ್ರವಾದನೆಗಳಿಗೆ ಆಧಾರವೇನು? ಎಂದು ಪ್ರಶ್ನಿಸಿದರೆ ಅವರಿಗೆ ಉತ್ತರ "ಬ್ರಿಟಿಷ್ ಮ್ಯೂಸಿಯಂ"ನಲ್ಲಿದೆ.



1845ರಲ್ಲಿ ಮಧ್ಯಏಷ್ಯಾದಲ್ಲಿ ಬ್ರಿಟಿಷ್ ರಾಯಭಾರಿ ಅಧಿಕಾರಿಯಾಗಿದ್ದ ಆಸ್ಟಿನ್ ಹೆನ್ರಿಲೇಯಾರ್ಡ್ ಉತ್ತಮ ಭೂ ಸಂಶೋಧಕನಾಗಿದ್ದ ಮತ್ತು ಓಟೋಮನ್ ಸಂಸ್ಥಾನದ ಸುಲ್ತಾನನ ಜೊತೆ ಉತ್ತಮ ಬಾಂಧ್ಯವ್ಯ ಹೊಂದಿದ್ದ. ಈತ ಇರಾಕ್‌ನ ಮರುಭೂಮಿಯಲ್ಲಿ ಭೂ ಸಂಶೋದನೆ ಮಾಡಲು ಅನುಮತಿುನ್ನು ಪಡೆದುಕೊಂಡನು. ಇಂದಿನ ಮೊಸಾಲ್ ನಗರದ ಬಳಿ ಆತ ಎರಡು ಮೈಲು ಉದ್ದದ ಕಲ್ಲಿನ ಶಾಸನವನ್ನು ಉತ್ಕತನದಿಂದ ಸಂಶೋಧಿಸಿದನು, ಸತತ 10 ವರ್ಷಗಳ ಪರಿಶ್ರಮದಿಂದ ಅದನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಲಂಡನ್‌ನ ಬ್ರಿಟಿಷ್ ಮ್ಯೂಸಿಯಂಗೆ ಹಡಗಿನ ಮುಖಾಂತರ ಸಾಗಣೆ ಮಾಡಿದನು. ಇದು ಪ್ರಪಂಚದಲ್ಲೇ ಅಸ್ಸೀರಿಯಾ ಸಾಮ್ರಾಜ್ಯದ ಬಗ್ಗೆ ತಿಳಿಸಿಕೊಡುವ ಅತ್ಯುತ್ತಮ ಸಂಗ್ರಹವಾಗಿದೆ(ಚಿತ್ರದಲ್ಲಿ ನೋಡಬಹುದು).

ಸುಣ್ಣದ ಕಲ್ಲಿನಲ್ಲಿ ಕೆತ್ತಿದ ಅದರ ಅನೇಕ ಭಾಗಗಳು ಬೆಂಕಿಗೆ ಆಹುತಿಯಾಗಿ ಮೂಲರೂಪ ಕಳೆದುಕೊಂಡಿದ್ದವು, ಆದರೂ ಉಳಿದ ಭಾಗಗಳು ಚೆನ್ನಾಗಿದ್ದವು, ಅದನ್ನು ಅಸ್ಸೀರಿಯಾ ಗ್ಯಾಲರಿಯಲ್ಲಿ ಇಡಲಾಗಿದೆ. ಇದು ನಮಗೆ ನಹೂಮನ ಪ್ರವಾದನೆಯನ್ನು ಮತ್ತೆ ನೆನಪಿಸುತ್ತದೆ, ಅದೇನೆಂದರೆ ...."ಬೆಂಕಿಗೆ ತುತ್ತಾಗುವರು"

## ರಾಜರ ಆಟ:

ಅಶ್ಯೂರ್ಯರ ರಾಜರುಗಳ ಪ್ರಮುಖವಾದ ಆಟ ಸಿಂಹಬೇಟೆಯಾಗಿದೆ. ಇದನ್ನು ಗೋಡೆಯ ಕೆತ್ತನೆಯ ಚಿತ್ರಣದ ಶಾಸನದಲ್ಲಿ ನೋಡಬಹುದು. ಅವರುಗಳು ಸಿಂಹಗಳನ್ನು ಬೇಟೆಯಾಡಿದರೂ, ಸಿಂಹಗಳಿಗೆ ವಿಶೇಷ ಗೌರವವನ್ನು ಮತ್ತು ಅದ್ಯತೆಯನ್ನು ಕೊಡುತ್ತಿದ್ದರು. ಅದಕ್ಕಾಗಿ ಸುಮಾರು 15ಅಡಿ ಎತ್ತರದ 16ಟನ್ ತೂಕವುಳ್ಳ ಕಲ್ಲಿನ, ಮಾನವರ ತಲೆಯುಳ್ಳ ಸಿಂಹದ ದೇಹವುಳ್ಳ ವಿಗ್ರಹಗಳನ್ನು ಕೆತ್ತಿಸಿ



ಅರಮನೆಯ ಮುಂದೆ ಇಟ್ಟುಕೊಂಡಿದ್ದರು. ಅವರುಗಳ ಮೂಢನಂಬಿಕೆಯೆಂದರೆ ಅವುಗಳು ಅವರನ್ನು ಕಾಪಾಡುತ್ತವೆ ಎಂಬುದಾಗಿತ್ತು. ದಾನಿಯೇಲನ ಪ್ರವಾದನೆ ಗ್ರಂಥ 7:4ರಲ್ಲಿ ಸಿಂಹವನ್ನು ಅಶ್ಯೂರ್ಯರ ಲಾಂಛನವಾಗಿ ತಿಳಿಸಿದೆ. ನಿನವೆಯ ನಾಶನದ ಬಗ್ಗೆ ನಹೂಮನು ತಿಳಿಸುತ್ತಾ "ಮೃಗರಾಜರ ಗವಿ, ಪ್ರಾಯದ ಸಿಂಹಗಳ ಹಕ್ಕೆ ಎಲ್ಲಿ? (ನಹೂಮ 2:11) ಎಂದು ತಿಳಿಸಿದ್ದಾನೆ. ಈ ಪ್ರಶ್ನೆಗೆ ಇಂದು ಸರಳವಾದ ಉತ್ತರ ಸಿಕ್ಕಿದೆ –"ಬ್ರಿಟಿಷ್ ಮ್ಯೂಸಿಯಂ"ನಲ್ಲಿದೆ.

ನೆನಪಿನಲ್ಲಿಡಿ, ಇಷ್ಟೆಲ್ಲಾ ಮಹತ್ವವಾದ ಸಂಗತಿಗಳ ಸಂಗ್ರವಾಗಿರುವ ಬ್ರಿಟಿಷ್ ಮ್ಯೂಸಿಯಂಗೆ ನೀವು ಬೇಟಿನೀಡಲು ಯೋಚಿಸಬೇಕಿಲ್ಲ, ಏಕಂದರೆ ಇದಕ್ಕೆ ಯಾವುದೇ ಪ್ರವೇಶ ಶುಲ್ಕವಿಲ್ಲ. ಇಲ್ಲಿಗೆ ಬರುವ ವೀಕ್ಷಕ ಅಧಿಕವಾದ, ಆಶ್ಚರ್ಯಕರವಾದ ಚಿತ್ರಗಳ ಸಂಗ್ರಹವನ್ನು ನೋಡಬಹುದು, ಇವುಗಳೇ ಸತ್ಯವೇದ ಸತ್ಯವಾದುದಾಗಿದೆ ಎಂಬುದನ್ನು ತಿಳಿಯಲು ಸಹಕಾರಿಯಾಗಿದೆ.

## –: ಸಹನೆ :–




ಸ್ಯಾಡಿ.....ಸ್ಯಾಡಿ.....ಸ್ಯಾಡಿ–ಹಿಂದಕ್ಕೆ ಬಾ, ಹಿಂತಿರುಗಿ ಬಾ ಎಂದು ನನ್ನ ನಾಯಿಯನ್ನು ಕರೆಯುತ್ತಿದ್ದುದು ವ್ಯರ್ಥವಾಗಿತ್ತು, ಏಕಂದರೆ ಅದು, ಪಕ್ಕದ ಮನೆಯ ಮತ್ತೊಂದು ನಾಯಿಯನ್ನು ಅಟ್ಟಿಸಿಕೊಂಡು ಓಡಿ ಮರಗಳ ಮರೆಯಲ್ಲಿ ಮರೆಯಾಯಿತು, ಆಗ ನನಗೆ ಎಷ್ಟುಸಿಟ್ಟು ಬಂದಿತೆಂದರೆ, ನನಗೇನಾದರೂ ಯಾರನ್ನಾದರೂ ಅಲ್ಲೇ ನಾಶಮಾಡುವ ಶಕ್ತಿಯಿದ್ದರೆ, ಆ ಕ್ಷಣದಲ್ಲಿ ನನ್ನ ನಾಯಿಯನ್ನು ಎಳೆದು ಕೊಂದುಹಾಕಬೇಕು ಎನಿಸಿತು.

ಆದರೆ ಓಡಿಹೋದ ನನ್ನ ನಾಯಿ ಬಹಳಕಾಲ ದೂರಹೋಗಲಿಲ್ಲ, ಸ್ವಲ್ಪಹೊತ್ತಿನ ನಂತರ ಹಿಂತಿರುಗಿ ಬಂದಿತು, ಅದರ ಮುಖದಲ್ಲಿ "ಕ್ಷಮಿಸಿ" ಎಂಬ ಭಾವನೆಯಿತ್ತು, ಅದು ಪ್ರೀತಿಯಿಂದ ಬಾಲ ಅಲ್ಲಾಡಿಸುತ್ತಾ ನನ್ನಬಳಿ ಬಂದು ನನ್ನ ಅಂಗಾಲನ್ನು ನೆಕ್ಕಿತು. ನನ್ನ ಮೊಣಕಾಲಿನ ಮೇಲೆ ತಲೆಯಿಟ್ಟು ಮಲಗಿತು. ಆ ಕ್ಷಣಕ್ಕೆ ನನ್ನ ಕೋಪವೆಲ್ಲಾ ಕಳೆದುಹೋಗಿ ನಾನು, ಅದನ್ನು ಕ್ಷಮಿಸಿದೆನು. ಪ್ರೀತಿಯಿಂದ ಅದರ ಮೈಯನ್ನು ಸವರಿದೆ. ನಾನು ನನ್ನ ನಾಯಿಯನ್ನು ನಾಶಮಾಡುವ ಶಕ್ತಿಯನ್ನು ಹೊಂದಿಲ್ಲದಿರುವುದಕ್ಕೆ ಸಂತೋಷವುಳ್ಳವನಾದೆನು.

ನಾವುಗಳು ಯಾರನ್ನೇ ಆದರೂ, ನಾವು ಮನಸ್ಸಿನಲ್ಲಿ ಅಂದುಕೊಂಡ ತಕ್ಷಣ ನಾಶಮಾಡುವ, ಮುಯ್ಯಿ ತೀರಿಸುವ ಶಕ್ತಿ ಹೊಂದಿಲ್ಲದಿರುವುದು ತುಂಬಾ ಒಳ್ಳೆಯದೇ ಆಗಿದೆ. ಇಲ್ಲವಾದಲ್ಲಿ ಇಂದು ಪ್ರಪಂಚದಲ್ಲಿ ಮಾನವರು ಉಳಿಯಲು ಸಾಧ್ಯವೇ ಇರುತ್ತಿರಲಿಲ್ಲ.

ಈ ಘಟನೆಯಿಂದ ನಾವು ಪರಲೋಕದಲ್ಲಿರುವ ತಂದೆಯಾದ ದೇವರ ಪ್ರೀತಿಯ ಬಗ್ಗೆ ತಿಳಿದುಕೊಂಡೆನು. ತಂದೆಯಾದ ದೇವರು ಸರ್ವಶಕ್ತನಾಗಿದ್ದರೂ, ಎಷ್ಟು ಸಹನೆಯುಳ್ಳವನಾಗಿದ್ದಾನೆ, ಆತನ ಕರೆಯುವಿಕೆಗೆ ನಾವುಗಳು ಕಿವುಡಾಗಿದ್ದರೂ, ಆತನ ನಿಯಮಗಳನ್ನು ನಾವು ಮೀರಿನಡೆಯುವವರಾದರೂ ಆತ ಸಹನೆಯಿಂದ ನಾವುಗಳು ಹಿಂತಿರುಗಿ ಬರುವ ಅವಕಾಶವನ್ನು, ನಾವು ನಮ್ಮ ತಪ್ಪಿಗೆ ಪಶ್ಚಾತ್ತಾಪ ಪಡುವ ಅವಕಾಶ ನೀಡಿದ್ದಾನೆ. ನಮಗೆ ಜೀವಿಸಲು ಮತ್ತೊಂದು ಅವಕಾಶ ಕೊಟ್ಟಿದ್ದಾನೆ. ಹಾಗಾಗಿ ನಾವು ನಮ್ಮ ಕೆಟ್ಟ ಜೀವಿತವನ್ನು ಬಿಟ್ಟು ಸುನಡತೆಯುಳ್ಳವರಾಗಿ ದೇವರ ಬಳಿಗೆ ಬರೋಣ. ಏಕಂದರೆ,

"ಕರ್ತನೇ, ನೀನು ಕನಿಕರವೂ ದಯೆಯೂ ಉಳ್ಳ ದೇವರು, ದೀರ್ಘಶಾಂತನೂ, ಬಹಳ ಪ್ರೀತಿಯೂ ನಂಬಿಕೆಯೂ ಉಳ್ಳವನು" (ಕೀರ್ತನೆಗಳು 86:15).

–ಆನಟ್ಟೆ ಹಾಲ್ಪನ್

# ಇಸ್ರಾ0ಯೇಲ್ಯರಲ್ಲಿ ಪ್ರಾರಂಭದ ನ್ಯಾ0ಯಸ್ಥಾಪಕರ ಚರಿತ್ರೆ

## ಬೋಕೀಮಿನಲ್ಲಿ ಎಚ್ಚರಿಕೆ [ನ್ಯಾ0ಯಸ್ಥಾಪಕರು 2:1–5]

ಇಸ್ರಾಯೇಲ್ಯರು ದೇವರ ಆಜ್ಞೆಗಳಿಗೆ ಅವಿಧೇಯರಾಗಿ, ಕಾನಾನ್ಯರ ನಡುವಳಿಕೆಗಳನ್ನು ಅನುಸರಿಸಿ ಪಾಪ ಮಾಡುವವರಾದ ಸಂದರ್ಭದಲ್ಲಿ 0ಯೆಹೋವದೇವರು ಇಸ್ರಾ0ಯೇಲ್ಯರಿಗೆ ಶ್ರಮ, ಸಂಕಟ ಮತ್ತು ತೊಂದರೆಗಳು ಉಂಟಾಗುವ ಹಾಗೆ ಮಾಡಿದನು. ಆದರೆ 0ಯೆಹೋವದೇವರು ಕೃಪಾಪೂರ್ಣನೂ, ಕರುಣಾಳುವೂ ಆಗಿರುವುದರಿಂದ, ತನ್ನ ಮಕ್ಕಳನ್ನು ಕಾಪಾಡುವವನಾದದರಿಂದ (ಕೀರ್ತನೆಗಳು 103:8–14) ತನ್ನ ದೂತನನ್ನು ಇಸ್ರಾ0ಯೇಲ್ಯರ ಬಳಿಗೆ ಕಳುಹಿಸಿ, ಅವರ ಅವಿವೇಕತನದ ಮಾರ್ಗಗಳನ್ನು ಬದಲಾಯಿಸಿಕೊಂಡು, ಪಶ್ಚಾತ್ತಾಪಪಟ್ಟು ದೇವರ ಬಳಿಗೆ ಬರುವಂತೆ ಒಂದು ಅವಕಾಶವನ್ನು ಕೊಟ್ಟನು. ಆ ರೀತಿಯಾಗಿ 0ಯೆಹೋವನ ಎಚ್ಚರಿಕೆಯನ್ನು ತಿಳಿಸಲು ಬಂದಂತಹ ದೂತನ ಹೆಸರನ್ನು ತಿಳಿಸಿಲ್ಲ. ಆತ ಗಿಲ್ಗಾಲಿನಿಂದ ಹೊರಟು ಬೋಕೀಮಿಗೆ ಬಂದನು(ಬೋಕೀಮ್ ಎಂದರೆ ಅಳುವುದು, ಗೋಳಾಡುವುದು ಎಂದರ್ಥ). 0ಯೆಹೋವನ ದೂತನು ಇಸ್ರಾ0ಯೇಲ್ಯರಿಗೆ ನೀವು ದೇವರ ಆಜ್ಞೆಗಳನ್ನು ಅನುಸರಿಸಿ ನಡೆ0ಯುವಲ್ಲಿ ವಿಫಲರಾಗಿದ್ದೀರಿ ಮತ್ತು ದೇವರು ನಿಮ್ಮೊಡನೆ ಮಾಡಿಕೊಂಡ ಒಡಂಬಡಿಕೆ0ಯನ್ನು ಮುರಿದವರಾಗಿದ್ದೀರಿ(ನ್ಯಾಯಸ್ಥಾಪಕರು 2:2–3), ಆದ್ದರಿಂದ ದೇವರು ನಿಮ್ಮನ್ನು ಶಿಕ್ಷಿಸುತ್ತಾನೆ ಎಂದು ಎಚ್ಚರಿಕೆ0ಯನ್ನು ನೀಡಿದನು.



ಗಿಲ್ಗಾಲ್ ಎಂದರೆ ನಿವಾರಿಸುವುದು ಅಥವ ನಿವರಣೆ ಎಂಬರ್ಥ. ಈ ಪ್ರದೇಶದಲ್ಲಿ ಇಸ್ರಾಯೇಲ್ಯರು 0ಯೋರ್ದನ್ ಹೊಳೆ0ಯನ್ನು ದಾಟಿದ ಸಂದರ್ಭದಲ್ಲಿ 0ಯೆಹೋವದೇವರು ಇಸ್ರಾ0ಯೇಲ್ಯರಿಗೆ ಐಗುಪ್ತದ(ಈಜಿಪ್ಟ್) ದಾಸತ್ವವನ್ನು ನಿವಾರಿಸಿದನು(0ಯೆಹೋಶುವ 5:9). ಈ ಕಾರಣದಿಂದ 0ಯೆಹೋವನ ದೂತನು ಇಸ್ರಾಯೇಲ್ಯರಿಗೆ ದಾಸತ್ವ ನಿವಾರಣೆ0ಯಾದ ಸ್ಥಳದಿಂದ ಬಂದು, ಅವರು ಮತ್ತೊಮ್ಮೆ ಪಾಪದಿಂದ ನಿವಾರಿಸಲ್ಪಡಲಿ ಎಂಬ ಉದ್ದೇಶದಿಂದ ಗಿಲ್ಗಾಲಿನಿಂದ ದೂತನು ಬಂದಿದ್ದಾನೆ.

ಇಸ್ರಾಯೇಲ್ಯರು ದೂತನ ಮಾತನ್ನು ಕೇಳಿದಾಗ ತಾವು ದೇವರಿಂದ ಎಷ್ಟು ದೂರ ಹೋಗಿದ್ದೇವೆ ಎಂಬುದನ್ನು ಅರಿತರು. ತಮ್ಮ ಕೃತ್ಯಗಳಿಗೆ ಪಶ್ಚಾತ್ತಾಪಪಟ್ಟು ಅತ್ತರು, ಜೊತೆಗೆ ತಾವು ತಮ್ಮ ಮಾರ್ಗಗಳನ್ನು ಬದಲಾಯಿಸಿಕೊಳ್ಳುತ್ತೇವೆ ಎಂದು ಮಾತುಕೊಟ್ಟರು. ಈ ಕಾರಣದಿಂದ ಆ ಸ್ಥಳಕ್ಕೆ ಬೋಕೀಮ್ ಅಂದರೆ ಅಳುವುದು ಅಥವಾ ಗೋಳಾಡುವುದು ಎಂದು ಹೆಸರಾಯಿತು.

ಇದಾದ ನಂತರ ಸ್ವಲ್ಪಕಾಲ ಇಸ್ರಾಯೇಲ್ಯರು ದೇವರ ವಾಕ್ಯಗಳಿಗೆ ವಿಧೇಯರಾಗಿ ನಡೆ0ಯುತ್ತಿದ್ದರು, ಆದರೆ ಬಹುಬೇಗನೇ ದೇವರ ಆಜ್ಞೆಗಳನ್ನು ಮರೆತು, ತಾವು ಹಿಂದೆ ಪಶ್ಚಾತ್ತಾಪಪಟ್ಟಿದ್ದನ್ನೂ ಮತ್ತು ಅತ್ತಿದ್ದನ್ನೂ ಮರೆತರು. ಜೊತೆಗೆ ಮತ್ತೆ ಕಾನಾನ್ಯರ ಆಚಾರಗಳಿಗೆ ಅಡಿಯಾಳಾದರು, ಈ ನಡುವಳಿಕೆಯಿಂದ ಇಸ್ರಾ0ಯೇಲ್ಯರ ಕೆಟ್ಟತನ ಹೆಚ್ಚುತ್ತಾ ಹೋಯಿತು, ನಿಜವಾದ 0ಯೆಹೋವದೇವರು ಒಬ್ಬನನ್ನೇ ಆರಾಧಿಸುವುದನ್ನು ಬಿಟ್ಟು, ಬೇರೆ0ಯ ಸುಳ್ಳುದೇವರುಗಳಾದ ಬಾಳ್, ಅಷ್ಟೋರೋತ್(ನ್ಯಾ0ಯಸ್ಥಾಪಕರು 2:13) ಮುಂತಾದವುಗಳನ್ನು ಪೂಜಿಸುವವರಾದರು.



**ಒತ್ನೆಯೇಲನ ಮುಖಾಂತರ ಇಸ್ರಾ0ಯೇಲ್ಯರಿಗೆ ಕ್ರೂರಿ0ಯಾದ ಕೂಷನ್‌ನಿಂದ ಬಿಡುಗಡೆ:**

ಇಸ್ರಾಯೇಲ್ಯರ ಪಾಪದ ಪರಿಣಾಮ, ಸಂಕಟ ತೊಂದರೆಗಳು ಪ್ರಾರಂಭವಾದವು. 0ಯೆಹೋವನು ಇಸ್ರಾಯೇಲ್ಯರನ್ನು ದಂಗೆಕೋರರಿಗೆ ಒಪ್ಪಿಸಿಕೊಟ್ಟನು. ಅರಾಮ್(ಸಿರಿ0ಯಾ)ದೇಶದ ಮಹಾಸೈನ್ಯ 0ಯೂಫ್ರಟೀಸ್ ನದಿಯನ್ನು ದಾಟಿಬಂದು ಇಸ್ರಾಯೇಲ್ಯ ದೇಶದ ಉತ್ತರಭಾಗವನ್ನು ಆಕ್ರಮಣಮಾಡಿ, ಅಲ್ಲಿನ ಪಟ್ಟಣಗಳನ್ನು ನಾಶಮಾಡಿ, ಸಂಪತ್ತನ್ನೆಲ್ಲಾ ಲೂಟಿಮಾಡಿದರು ಮತ್ತು ಅಲ್ಲಿನ ಜನರನ್ನು ಕೊಂದುಹಾಕಿದರು. ಅಲ್ಲಿಂದ ದಕ್ಷಿಣದ ಕಡೆಗೆ ಆಕ್ರಮಣ ಮುಂದುವರೆಸಿ 0ಯೆಹೂದ ಕುಲದ ಸ್ವಾಸ್ತ್ಯದವರೆಗೂ ಆಕ್ರಮಣ ಮಾಡಿದರು.

ಆ ರೀತಿಯಾಗಿ ಆಕ್ರಮಣ ಮಾಡಿದ ಅರಾಮ್ಯರ ನಾಯಕ ಮತ್ತು ರಾಜ ಮಹಾಕ್ರೂರಿ0ಯಾದ ಕೂಷನ್ ರಿಷಾತಯಿಮ್ ಎಂಬುವವನಾಗಿದ್ದಾನೆ. ಆತನ ಹೆಸರಿನ ಅರ್ಥ "ಕಪ್ಪುತನದ ಎರಡುಪಟ್ಟು ಕೆಟ್ಟತನ" ಎಂಬುದಾಗಿದೆ. ಅವನು ತನ್ನ ಹೆಸರಿಗೆ ತಕ್ಕಂತೆ ಮಹಾಕ್ರೂರಿ0ಯಾಗಿದ್ದು, ಇಸ್ರಾಯೇಲ್ಯರು ಅವನಿಗೆ ದಾಸರಾಗಿ ಕಡುಕಷ್ಟ ಅನುಭವಿಸುವಂತಾಯಿತು. ಇಸ್ರಾಯೇಲ್ ಜನರು 0ಯೆಹೋವನನ್ನು ತ್ಯಜಿಸಿದ್ದರಿಂದ, ಅವರು ಅರಾಮ್ಯರಿಗೆ ದಾಸರಾಗಿ ಕ್ರೂರಿ0ಯೂ, ನಿರ್ದಯಿ0ಯೂ ಆದ ಕೂಷನ್ನನ ಅಧೀನದಲ್ಲಿ ಎಂಟು ವರ್ಷಗಳು ಕಳೆ0ಯಬೇಕಾಯಿತು. ಇದಕ್ಕೆ ಕಾರಣ 0ಯೆಹೋವದೇವರಿಗೆ ಇಸ್ರಾಯೇಲ್ಯರು ಅವಿಧೇಯರಾದುದೇ ಆಗಿದೆ.

ಆದರೂ ಇಸ್ರಾಯೇಲ್ ದೇಶದಲ್ಲಿ ಕೆಲವರು ನೀತಿವಂತರಾದ ನಂಬಿಕಸ್ತರಿದ್ದರು. ಆ ನೀತಿವಂತ ಮನುಷ್ಯರಲ್ಲಿ ಒತ್ನಿಯೇಲನು ಒಬ್ಬನಾಗಿದ್ದಾನೆ. ಈತ ಕಾಲೇಬನ ತಮ್ಮನೂ, ಕೆನೆಜನ ಮಗನೂ ಆಗಿದ್ದಾನೆ. ಈತ ಇತರ ನಂಬಿಕಸ್ತ ಜನರರೊಡನೆ ಸೇರಿ, ದೇವರಕಡೆಗೆ ಜನರು ತಿರುಗುವಂತೆ ಮಾಡಿದನು. ಇದರಿಂದ ಜನರಲ್ಲಿ ಒಂದು ಹೊಸ ಶಕ್ತಿ ಬಂದಿತು, ಇಸ್ರಾ0ಯೇಲ್ಯರು ತಮ್ಮ ಮಾರ್ಗವನ್ನು ಬದಲಾವಣೆ ಮಾಡಿಕೊಳ್ಳುವಂತೆ ಮಾಡಿದನು. ಈತ 0ಯೆಹೋವನ ಮಾರ್ಗದಲ್ಲಿ ನಡೆದನು. ಅರಾಮ್ ರಾಜ್ಯದ ಅರಸನಾದ ಕೂಷನ್ ರಿಷಾತ0ಯಮ್‌ನ ಮೇಲೆ 0ಯುದ್ಧಕ್ಕೆ ಹೊರಟು ಅವನನ್ನು ಪೂರ್ಣವಾಗಿ ಸೋಲಿಸಿಬಿಟ್ಟನು(ನ್ಯಾಯಸ್ಥಾಪಕರು 2:9–11). ನಂತರ ಒತ್ನಿಯೇಲನು ಇಸ್ರಾಯೇಲ್ಯರ ಮೇಲೆ ನ್ಯಾಯಸ್ಥಾಪಕನಾಗಿ ನಾಲ್ವತ್ತು ವರುಷ ಪಾಲಿಸಿದನು. ದೇಶದಲ್ಲಿ ನಾಲ್ವತ್ತು ವರುಷ ಸಮಾಧಾನವಿತ್ತು.

ಈ ಚರಿತ್ರೆಯನ್ನು ನೋಡುವಾಗ ಇಸ್ರಾಯೇಲ್ಯರು ಒಂದು ವೃತ್ತ ಪೂರೈಸಿದ್ದಾರೆ – ಪಾಪಮಾಡಿದರು–> ಸಂಕಟಕ್ಕೆ ಒಳಗಾದರು–> ದೇವರಲ್ಲಿ ಮೊರೆಯಿಟ್ಟರು–> 0ಯೆಹೋವನು ರಕ್ಷಣೆ ದ0ಯಪಾಲಿಸಿದನು.

ಇಸ್ರಾಯೇಲ್ಯರು ಅತಿಯಾದ ತೊಂದರೆಗಳಿಗೆ, ಕಷ್ಟಗಳಿಗೆ ಸಿಕ್ಕಿಹಾಕಿಕೊಂಡಿದ್ದರೂ, ಅವರು ದೇವರಲ್ಲಿ ನಂಬಿಕೆಯಿಟ್ಟು ಬೇಡಿಕೊಂಡದ್ದರಿಂದ ಮತ್ತು 0ಯೆಹೋವದೇವರಿಗೆ ಮೊದಲ ಆದ್ಯತೆ ಕೊಟ್ಟದ್ದರಿಂದ ದೇವರು ಅವರನ್ನು ಕಷ್ಟದಿಂದ ಬಿಡಿಸಿ ಸಮಾಧಾನ ದ0ಯಪಾಲಿಸಿದನು. ಅದೇರೀತಿ ನಾವು ಎಷ್ಟೇ ಕಡುಕಷ್ಟದಲ್ಲಿದ್ದರೂ, ನಾವು ದೇವರಿಗೆ ಮೊದಲಸ್ಥಾನ ಕೊಟ್ಟು ಬೇಡಿಕೊಂಡರೆ ಆತ ನಮ್ಮನ್ನು ಎಲ್ಲಾ ತೊಂದರೆಗಳಿಂದ ಪಾರುಮಾಡುತ್ತಾನೆ ಎಂಬುದನ್ನು ಮೇಲಿನ ಪಾಠದಿಂದ ತಿಳಿ0ಯಬಹುದಾಗಿದೆ.

